ಕರ್ನಾಟಕ ಸರ್ಕಾರ

# 2023–24ನೇ ಸಾಲಿನ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ, ಬೆಂಗಳೂರು ವಾರ್ಷಿಕ ಲೆಕ್ಕಪರಿಶೋಧನಾ ವರದಿ

ಬೆಂಗಳೂರು ಪ್ರಾಂತೀಯ ಕಛೇರಿ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಬೆಂಗಳೂರು

**ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು ಇದರ 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ವಿವರ.**

| ಕ್ರ.ಸಂ. | ಕಂಡಿಕೆ | ವಿವರ | ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) |
|---|---|---|---|---|
| 1 | **5.1** | TDS Receivable ಆದಾಯ ತೆರಿಗೆ ಇಲಾಖೆಯಿಂದ ಹಿಂಪಡೆಯದಿರುವುದು | 1,00,324.00 | |
| 2 | 9.1 | ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕಗಳನ್ನು ಕಡಿಮೆ ವಸೂಲಿಸಿರುವುದು | | 4,68,856.00 |
| 3 | 13.1 | M/s. E & Y ಸಂಸ್ಥೆಗೆ ಸಲಹಾ ವೆಚ್ಚವನ್ನು ಪಾವತಿಸಿರುವುದು | 45,60,000.00 | |
| 4 | 18.1 | Project ಗಳಿಗೆ ಸಂಬಂಧಿಸಿದಂತೆ | 7,55,200.00 | |
| 5 | 18.2 | ಸದರಿ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಕಡತ ಪರಿಶೀಲನೆಯಲ್ಲಿ ಗಮನಿಸಲಾದ ಅಂಶಗಳು | 4,59,492.00 | |
| 6 | 20.1 | ನಿವೃತ್ತ ಅಧಿಕಾರಿಗಳು ಅಥವಾ ನೌಕರರನ್ನು ನೇಮಿಸಿಕೊಂಡು ವೇತನ ಪಾವತಿಸಿರುವುದು | 42,48,424.00 | |
| 7 | 23.1 | ಟೆಂಡರ್ ಕರೆಯದೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆದಿರುವುದು | 2,04,18,530.00 | |
| 8 | 24.3 | Answer Booklets ಗಳನ್ನು ದಾಸ್ತಾನಿಗೆ ಪಡೆಯದಿರುವುದು | 1,00,890.00 | |
| | | **ಒಟ್ಟು ಮೊತ್ತ** | **3,06,42,860.00** | **4,68,856.00** |

ಅಪರ ನಿರ್ದೇಶಕರು
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

## ವಿಶ್ವವಿದ್ಯಾಲಯದ ಸ್ಥೂಲನೋಟ

**ವಿಶ್ವವಿದ್ಯಾಲಯದ ಸ್ಥಾಪನೆಯ ಹಿನ್ನೆಲೆ:**

ಭಾರತದ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್ ಇವರು ಮೂಲತಃ ಒಬ್ಬ ಅರ್ಥಶಾಸ್ತ್ರಜ್ಞರಾದ ಕಾರಣ ಅವರ 125ನೇ ಜನ್ಮದಿನಾಚರಣೆಯ ಸ್ಮರಣಾರ್ಥವಾಗಿ ಹಾಗೂ ಅವರ ಉತ್ಕೃಷ್ಟ ಆರ್ಥಿಕ ದೂರದೃಷ್ಟಿ ಹಾಗೂ ಕಲ್ಪನೆಗಳನ್ನು ಸಾಕಾರಗೊಳಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಪ್ರಾರಂಭಿಸುವ ಸಲುವಾಗಿ **ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016(ಭಾ), ದಿ:20.07.2016 ರಲ್ಲಿ ಕ್ರಿಯಾ ಯೋಜನೆ ಮತ್ತು ಅಂದಾಜು ವೆಚ್ಚ ಇತ್ಯಾದಿ ವಿವರಗಳನ್ನು ಒಳಗೊಂಡಂತೆ** ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ಸಂಸ್ಥೆಯನ್ನು ವಿಶ್ವದಲ್ಲಿಯೇ ಅತಿ ಶ್ರೇಷ್ಠ ಮಟ್ಟದ ಸಂಸ್ಥೆಯನ್ನಾಗಿ ಮಾಡಲು ಅಗತ್ಯವಾದ ಸಲಹೆ ಸೂಚನೆಯನ್ನು ನೀಡುವ ಸಲುವಾಗಿ ಒಂದು ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ. ಸದರಿ ಸಮಿತಿಯ ಶಿಫಾರಸ್ಸಿನ ಮೇರೆಗೆ **ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016, ದಿ:16.02.2017 ರಲ್ಲಿ** ಬೆಂಗಳೂರು, ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ಸಂಸ್ಥೆಯನ್ನು ಸ್ಥಾಪಿಸಿದ್ದು ಇದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಅಡಿಯಲ್ಲಿ ಸಂಸ್ಥೆಯ ಮೆ॥ ಮೊರಾಂಡಮ್ ಆಫ್ ಅಸೋಸಿಯೇಶನ್ ಹಾಗೂ ರೂಲ್ಸ್ ಅಂಡ್ ರೆಗ್ಯೂಲೇಶನ್ ಅನ್ನು **ನೋಂದಣಿ ಸಂಖ್ಯೆ: ಡಿಆರ್‌ಬಿ4/ಎಸ್‌ಒಆರ್/03/2017-18, ದಿ:03.04.2017** ರಲ್ಲಿ ನೋಂದಣಿ ಮಾಡಲಾಗಿದೆ. ಡಾ. ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಸಂಸ್ಥೆಯ ಆಡಳಿತ ಚಟುವಟಿಕೆಗಳನ್ನು ನಿರ್ವಹಿಸುವ ಸಲುವಾಗಿ **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಕರಾಉಶಿಪ/135/ಬೇಸ್/2016-17/728, ದಿ:30.03.2017** ರಲ್ಲಿ **ನಿರ್ವಹಣಾ ಸಮಿತಿ (Governing Council)** ಯನ್ನು ರಚನೆ ಮಾಡಿ ಕಾರ್ಯನಿರ್ವಹಿಸಲಾಗುತ್ತಿತ್ತು.

ಮುಂದುವರೆದು, ಕರ್ನಾಟಕ ಸರ್ಕಾರದ ನಡವಳಿ ಸಂಖ್ಯೆ: **ಇಡಿ 118 ಯುಬಿವಿ 2017, ದಿ:23.05.2017** ರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ಸಂಸ್ಥೆಯನ್ನು ಒಂದು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡುವ ಸಲುವಾಗಿ ಕರಡು ಅಧಿನಿಯಮವನ್ನು ರಚಿಸಿ, ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿ ಆರು ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ. ಸದರಿ ಸಮಿತಿಯ ಶಿಫಾರಸ್ಸಿನನ್ವಯ ಕರಡು ಅಧಿನಿಯಮವನ್ನು ರಚಿಸಿ ದಿನಾಂಕ: 21.09.2019 ರಂದು ಮಾನ್ಯ ರಾಷ್ಟ್ರಪತಿಗಳ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಕರ್ನಾಟಕ ರಾಜ್ಯಪತ್ರದ **ವಿಶೇಷ ರಾಜ್ಯ ಪತ್ರಿಕೆ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 03 ಶಾಸನ 2018**, ಬೆಂಗಳೂರು ದಿ:16.10.2019 ರಂತೆ "ಬೆಂಗಳೂರು ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯ ಅಧಿನಿಯಮ 2018" ಅನ್ನು ಪ್ರಕಟಿಸಲಾಗಿದ್ದು, **ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 41 ಯುಬಿವಿ 2018 (ಭಾಗ-2), ದಿ:30.10.2019** ರಂತೆ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ದಿನಾಂಕ: 30.10.2019 ರಿಂದ ಜಾರಿಗೆ ಬರತಕ್ಕದ್ದೆಂದು ಆದೇಶಿಸಲಾಗಿದೆ. ಅದರಂತೆ ಸದರಿ ಅಧಿನಿಯಮದ ಕಲಂ-03 ರಂತೆ **ಬೆಂಗಳೂರು ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯ** ಎಂದು ಕರೆಯಲಾಗುವ ಏಕಾತ್ಮಕ, ಸಂಯೋಜನೆಯನ್ನು ನೀಡದಿರುವ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.

ಸದರಿ ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ಸಂಸ್ಥೆಯು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ದಿ: 06.03.2017 ರಿಂದ 15.05.2017 ರವರೆಗೆ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಕಟ್ಟಡ, ರೇಸ್‌ಕೋರ್ಸ್ ರಸ್ತೆ ಇಲ್ಲಿ ದಿ: 16.05.2017 ರಿಂದ 02.03.2018 ರವರೆಗೆ ಹಾಗೂ ರಾಜಾಜಿಹಾಲ್, ಸೆಂಟ್ರಲ್ ಕಾಲೇಜು ಆವರಣದಲ್ಲಿ ದಿ: 03.03.2018 ರಿಂದ ದಿ: 02.09.2020 ರವರೆಗೆ ಕಾರ್ಯನಿರ್ವಹಿಸಿದ್ದು, ದಿ: 03.09.2020 ರಿಂದ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ 43.35 ಎಕರೆ ವಿಸ್ತೀರ್ಣದ ಜಾಗದಲ್ಲಿ ಸುಸಜ್ಜಿತವಾದ ಕಟ್ಟಡಗಳೊಂದಿಗೆ ಕಾರ್ಯನಿರ್ವಹಿಸುತ್ತಿರುತ್ತದೆ.

**ವಿಶ್ವವಿದ್ಯಾಲಯದ ಸಾಂಸ್ಥಿಕ ರಚನೆ:**

ಬೆಂಗಳೂರು ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯ ಅಧಿನಿಯಮ 2018ರ ಅಧ್ಯಾಯ–3, ಕಲಂ–9ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳ ವಿವರಗಳು ಈ ಕೆಳಕಂಡಂತಿವೆ.




**ವಿಶ್ವವಿದ್ಯಾಲಯದ ಸಮಿತಿಗಳು:**

**ದಿನಾಂಕ: 30.10.2019 ರಿಂದ ಬೆಂಗಳೂರು ಡಾ. ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯ ಅಧಿನಿಯಮ 2018 ಅನ್ನು ಜಾರಿಗೆ ತರಲಾಗಿದೆ.** ಸದರಿ ಅಧಿನಿಯಮದ ಅಧ್ಯಾಯ–4, ಕಲಂ–21ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾಲಯದ ಸಮಿತಿಗಳ ವಿವರ ಈ ಕೆಳಕಂಡಂತಿವೆ.

| ಕ್ರ.ಸಂ | ಮಂಡಳಿ/ಸಮಿತಿಯ ಹೆಸರು | ಕಲಂ | ಸಮಿತಿಯ ಅಧ್ಯಕ್ಷರು |
|---|---|---|---|
| 1 | ಕಾರ್ಯನಿರ್ವಾಹಕ ಪರಿಷತ್ | ಕಲಂ–21 | ಕುಲಪತಿಗಳು |
| 2 | ವಿದ್ಯಾವಿಷಯಕ ಪರಿಷತ್ | ಕಲಂ–25 | ಕುಲಪತಿಗಳು |
| 3 | ಶಿಕ್ಷಣ ಮಂಡಳಿ | – | ಕುಲಪತಿಗಳು |
| 3 | ಹಣಕಾಸು ಸಮಿತಿ | ಕಲಂ–27 | ಕುಲಪತಿಗಳು |
| 5 | ಮೂಲಸೌಕರ್ಯ ಮತ್ತು ಖರೀದಿ ಸಮಿತಿ | ಕಲಂ–28 | ಕುಲಪತಿಗಳು |
| 6 | ಇತರೆ ಮಂಡಳಿಗಳು, ಸಮಿತಿಗಳು ಮತ್ತು ಕೌನ್ಸಿಲ್‌ಗಳು | ಕಲಂ–29 | – |

**ವಿಶ್ವವಿದ್ಯಾಲಯದ ಅಧಿಕಾರಿಗಳ ಆಂತರಿಕ ಹೊಣೆಗಾರಿಕೆಗಳ ಸ್ಥೂಲ ಪರಿಚಯ:**

| ಕ್ರ.ಸಂ | ಪ್ರಾಧಿಕಾರ | ಹೊಣೆಗಾರಿಕೆ |
|---|---|---|
| 1 | ಕುಲಪತಿಗಳು | **ಕಲಂ–13ರ** ಅನುಸಾರ ಕುಲಪತಿಗಳು ಪೂರ್ಣಕಾಲಿಕ ಅಧಿಕಾರಿಯಾಗಿರುತ್ತಾರೆ ಮತ್ತು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯಾಗಿ ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರುತ್ತಾರೆ. ವಿಶ್ವವಿದ್ಯಾಲಯದಲ್ಲಿ ಶಿಸ್ತಿನ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಅಧಿಕಾರಗಳನ್ನು ಅವರು ಚಲಾಯಿಸಬೇಕು. ಈ ಅಧಿನಿಯಮದ ಎಲ್ಲಾ ನಿಬಂಧನೆಗಳು ಮತ್ತು ಶಾಸನಗಳು, ಅಧ್ಯಾದೇಶಗಳು, ನಿಯಮಗಳನ್ನು ಅವರು ಗಮನಿಸಬೇಕು ಮತ್ತು ಆ ಉದ್ದೇಶಕ್ಕಾಗಿ ಅಗತ್ಯವಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ. ವಿಶ್ವವಿದ್ಯಾಲಯದ ಶಾಸನಗಳು ಮತ್ತು ನಿಬಂಧನೆಗಳು ಒದಗಿಸಬಹುದಾದಂತಹ ಇತರ ಅಧಿಕಾರಗಳನ್ನು ಮತ್ತು ಇತರ ಕರ್ತವ್ಯಗಳನ್ನು ಮತ್ತು |

| | | |
|---|---|---|
| | | ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ತುರ್ತು ಸಂದರ್ಭದಲ್ಲಿ ಅವರ ಅಭಿಪ್ರಾಯದಲ್ಲಿ ತಕ್ಷಣದ ಕ್ರಮದ ಅಗತ್ಯವಿರುವಾಗ, ಕುಲಪತಿ ಅವರು ಅಗತ್ಯವೆಂದು ಭಾವಿಸುವಂತಹ ಕ್ರಮವನ್ನು ತೆಗೆದುಕೊಳ್ಳುತ್ತಾರೆ. |
| 2 | ಕುಲಸಚಿವರು | **ಕಲಂ–16ರ** ಅನುಸಾರ ಕುಲಸಚಿವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು, ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ ಪದನಿಮಿತ್ತ ಕಾರ್ಯದರ್ಶಿ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವಿಶ್ವವಿದ್ಯಾಲಯದ ದಾಖಲೆಗಳು, ಮೊಹರು ಹಾಗೂ ಕುಲಪತಿಗಳು ಮತ್ತು ಸಿಂಡಿಕೇಟ್‌ಗಳು ತಮಗೆ ವಹಿಸಿಕೊಟ್ಟ ಇತರೆ ಆಸ್ತಿಗಳ ಅಭಿರಕ್ಷಕರಾಗಿರುತ್ತಾರೆ ಮತ್ತು ವಿಶ್ವವಿದ್ಯಾನಿಲಯದ ಅಧಿಕೃತ ಪತ್ರ ವ್ಯವಹಾರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳೊಡನೆ ಮಾಡುವುದು, ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ, ವ್ಯಾಸಂಗ ಶಾಖೆಗಳ ಹಾಗೂ ಅಧ್ಯಯನ ಮಂಡಳಿಗಳ ಸಭಾ ಸೂಚನಾ ಪತ್ರಗಳನ್ನು ಹೊರಡಿಸುವ ಮತ್ತು ನಿರ್ಣಯಗಳ ನಡವಳಿಗಳನ್ನು ನಿರ್ವಹಿಸುವ ಕಾರ್ಯಗಳನ್ನು ಮಾಡುತ್ತಾರೆ. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನಡೆಸುವ ಸಭೆಗಳ ಸಭಾಕಾರ್ಯಸೂಚಿಯನ್ನು ಹಾಗೂ ಸಭೆ ನಡೆದ ಒಂದು ತಿಂಗಳೊಳಗೆ ಸಭಾ ನಡವಳಿಗಳನ್ನು ಮಾನ್ಯ ಕುಲಾಧಿಪತಿಗಳು ಮತ್ತು ಸರ್ಕಾರಕ್ಕೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಶ್ವವಿದ್ಯಾಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲಕಾಲಕ್ಕೆ ಕುಲಪತಿಗಳು or Executive Council ಪ್ರತ್ಯಾಯೋಜಿಸುವ ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. |
| 3. | ಪರೀಕ್ಷಾ ನಿಯಂತ್ರಕರು | **ಕಲಂ–17ರ** ಪರೀಕ್ಷಾ ನಿಯಂತ್ರಕರು ಸಂಬಂಧಪಟ್ಟ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯರಾಗಿರಬೇಕು. ಅವರು ಅಗತ್ಯವಿದ್ದಾಗ, ಕಾರ್ಯಕಾರಿ ಮಂಡಳಿ ಮತ್ತು ಹಣಕಾಸು ಸಮಿತಿ ಸಭೆಗಳಲ್ಲಿ ಆಹ್ವಾನಿತರಾಗಬಹುದು. ಪರೀಕ್ಷೆಗಳ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪೂರಕವಾಗಿರುವ ಎಲ್ಲಾ ಇತರ ವಿಷಯಗಳ ಉಸ್ತುವಾರಿಯನ್ನು ಹೊಂದಿರುತ್ತಾರೆ ಮತ್ತು ಶಾಸನಗಳು ಅಥವಾ ಅಧ್ಯಾದೇಶಗಳಿಂದ ಒದಗಿಸಬಹುದಾದಂತಹ ಇತರ ಕರ್ತವ್ಯಗಳನ್ನು ನಿರ್ವಹಿಸಬೇಕು ಅಥವಾ ಅವರಿಗೆ ಉಪವಿಭಾಗದಿಂದ ನಿಯೋಜಿಸಬಹುದು. ವಿಶ್ವವಿದ್ಯಾನಿಲಯದ ಚಟುವಟಿಕೆಗಳ ಗಾತ್ರ ಅಥವಾ ವ್ಯಾಪ್ತಿಯ ಆಧಾರದ ಮೇಲೆ ಪರೀಕ್ಷಾ ನಿಯಂತ್ರಕರಿಗೆ ಪರೀಕ್ಷಾ ಉಪ/ಸಹಾಯಕ ನಿಯಂತ್ರಕರ ಮಟ್ಟದಲ್ಲಿ ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಸಹಾಯ ಮಾಡಬಹುದು. |
| 3 | ವಿತ್ತಾಧಿಕಾರಿ (ಹಣಕಾಸುಅಧಿಕಾರಿ) | **ಕಲಂ–18ರ** ಅನುಸಾರ ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೆ ಒಳಪಟ್ಟು, ಅಂತಹ ಅಧಿಕಾರಗಳನ್ನು ಚಲಾಯಿಸಬೇಕು ಮತ್ತು ಶಾಸನಗಳು, ಸುಗ್ರೀವಾಜ್ಞೆಗಳು ಮತ್ತು ನಿಯಮಾವಳಿಗಳಿಂದ ನಿಯಮಿಸಬಹುದಾದ ಅಥವಾ ಕಾಲಕಾಲಕ್ಕೆ ಅಗತ್ಯವಿರುವಂತೆ ಅಂತಹ ಕರ್ತವ್ಯಗಳು ಮತ್ತು ಕಾರ್ಯಗಳನ್ನು ನಿರ್ವಹಿಸಬೇಕು. ಅವರು ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಅಗತ್ಯವಿರುವಂತೆ ವಿಶ್ವವಿದ್ಯಾನಿಲಯದ ಇತರ ಪ್ರಾಧಿಕಾರಗಳು ಅಥವಾ ಸಂಸ್ಥೆಗಳ ಸಭೆಗಳಲ್ಲಿ ಆಹ್ವಾನಿತರಾಗಿರುತ್ತಾರೆ. ವಿಶ್ವವಿದ್ಯಾನಿಲಯದ ಚಟುವಟಿಕೆಗಳ ಗಾತ್ರ ಅಥವಾ ವ್ಯಾಪ್ತಿಯ ಆಧಾರದ ಮೇಲೆ ಉಪ ಮತ್ತು ಸಹಾಯಕ ಹಣಕಾಸು ಅಧಿಕಾರಿಗಳ ಮಟ್ಟದಲ್ಲಿ ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಹಣಕಾಸು ಅಧಿಕಾರಿಗೆ ಸಹಾಯ ಮಾಡಬಹುದು |
| 4. | ಡೀನ್ | **ಕಲಂ–19ರ** ಅನುಸಾರ ವಿಶ್ವವಿದ್ಯಾಲಯದ ಪ್ರತಿ ಫ್ಯಾಕಲ್ಟಿಗೆ ಒಬ್ಬ ಡೀನ್ ಇರತಕ್ಕದ್ದು. ಅವರು ಸಂಬಂಧಪಟ್ಟ ಅಧ್ಯಾಪಕರ ಮುಖ್ಯ ಶೈಕ್ಷಣಿಕ ಅಧಿಕಾರಿಯಾಗಿರುತ್ತಾರೆ. ಅವರನ್ನು ವಿಶ್ವವಿದ್ಯಾಲಯದಲ್ಲಿನ ಪ್ರಾಧ್ಯಾಪಕರ ಪೈಕಿ ಕುಲಪತಿಗಳು ನೇಮಕ ಮಾಡುತ್ತಾರೆ. ಡೀನ್‌ನ ನೇಮಕದ ಕಾರ್ಯವಿಧಾನ, ಅವರ ಅಧಿಕಾರದ ಅವಧಿ ಮತ್ತು ಅವರ ಅಧಿಕಾರಗಳು, ಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಶಾಸನಗಳಿಂದ ಒದಗಿಸಲ್ಪಟ್ಟಿವೆ. |

**ಸಾಮಾನ್ಯ ಮಾಹಿತಿ:**

| | |
|---|---|
| **ಸಂಸ್ಥೆಯ ಹೆಸರು** | **ಡಾ॥ ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು** |
| **ಲೆಕ್ಕಪರಿಶೋಧನಾಅವಧಿ** | 2023–24 |
| **ಲೆಕ್ಕಪರಿಶೋಧನೆ ಪ್ರಾರಂಭ ಮತ್ತು ಮುಕ್ತಾಯದ ದಿನಾಂಕ** | ದಿನಾಂಕ: 19.08.2024 ರಿಂದ ದಿನಾಂಕ: 06.09.2024 ವರೆಗೆ |
| **ಲೆಕ್ಕಪರಿಶೋಧನೆಗೆ ಬಳಸಿದ ಮಾನವ ದಿನಗಳು** | 73 ಮಾನವ ದಿನಗಳು |
| **ಲೆಕ್ಕಪರಿಶೋಧನಾ ತಂಡ** | 1. ಶ್ರೀಮತಿ ನೂರೈನ್ ಕೆ ಷರೀಫ್, ಉಪನಿರ್ದೇಶಕರು<br>2. ಶ್ರೀಮತಿ ಸುಪ್ರಿಯಾ ಎಂ.ಎಸ್. ಲೆಕ್ಕಪರಿಶೋಧನಾಧಿಕಾರಿ. (ದಿನಾಂಕ: 21–08–2024 ರಿಂದ 26–08–2024)<br>3. ಶ್ರೀ ವೆಂಕಟೇಶ್ ಕೆ, ಲೆಕ್ಕಾಧೀಕ್ಷಕರು.<br>4. ಶ್ರೀ ಸತ್ಯನಾರಾಯಣ ಎಸ್, ಲೆಕ್ಕಾಧೀಕ್ಷಕರು.<br>5. ಶ್ರೀಮತಿ ದಾನಮ್ಮ ಎ.ಆರ್ ಪುರಾಣಿಕ್, ಲೆಕ್ಕಾಧೀಕ್ಷಕರು.<br>6. ಶ್ರೀಮತಿ ಸುಮ ಎಲ್, ಲೆಕ್ಕಪರಿಶೋಧಕರು. |
| **ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾ ಅಧಿಕಾರಿಗಳು** | ಶ್ರೀ ನಾಗರಾಜ್ ಶೇರೆಗಾರ್, ಕೆ.ಎಸ್.ಎ.ಎಸ್.,<br>ಅಪರ ನಿರ್ದೇಶಕರು,<br>ಬೆಂಗಳೂರು ಪ್ರಾಂತೀಯ ಕಛೇರಿ,<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,<br>ಬೆಂಗಳೂರು. |
| **ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ** | 20.09.2024 |

## 1. ಪ್ರಸ್ತಾವನೆ:

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ, ಬೆಂಗಳೂರು ಅಧಿನಿಯಮ 2018ರ ಕಲಂ–39(3) ರನ್ವಯ, ಸದರಿ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರಿಗೆ ಶಾಸನಬದ್ಧ ಅಧಿಕಾರ ವಹಿಸಲಾಗಿರುತ್ತದೆ. ಅದರಂತೆ, ಸದರಿ ಅಧಿನಿಯಮದ ಕಲಂ–39(3) ರನ್ವಯ ಹಾಗೂ ಸಾಮಾನ್ಯ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಕಲಂ–47(3) ರನ್ವಯ ವಿಶ್ವವಿದ್ಯಾಲಯದ 2022–23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿಯ ಮೊದಲನೇ ಸಭೆಯಲ್ಲಿ ಮಂಡಿಸಿ ದಿನಾಂಕ: 22.07.2024 ರಂದು ಪೂರ್ವಾನುಮೋದನೆ ಪಡೆಯಲಾಗಿರುತ್ತದೆ.

## 2. ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ ನಿಯಮಗಳು:

2023–24ನೇ ಸಾಲಿನ ಡಾ॥ ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ ಅಧಿನಿಯಮ–2018, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ–2000, ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ವಿತ್ತೀಯ ಹೊಣೆಗಾರಿಕೆಗಳ ಅಧಿನಿಯಮ–2003, ಕರ್ನಾಟಕ ನಾಗರಿಕ ಸೇವಾ ನಿಯಮಗಳು–1958, ಕರ್ನಾಟಕ ಆರ್ಥಿಕ ಸಂಹಿತೆ–1958, ಕರ್ನಾಟಕ ಬಜೆಟ್ ಕೈಪಿಡಿ ನಿಯಮಗಳು, ಕರ್ನಾಟಕ ಲೋಕೋಪಯೋಗಿ ಲೆಕ್ಕ ಸಂಹಿತೆ ಮತ್ತು ಇಲಾಖಾ ಸಂಹಿತೆ, ಕರ್ನಾಟಕ ಸಾದಿಲ್ವಾರು ಕೈಪಿಡಿ–1958, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು–2000ದ

ಉಪಬಂಧಗಳು ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಆದೇಶಗಳು/ ಸುತ್ತೋಲೆಗಳು/ಅಧಿಸೂಚನೆಗಳು ಹಾಗೂ ಮಾರ್ಗಸೂಚಿಗಳನ್ವಯ ತಪಾಸಣೆ ಮಾಡಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

### 3. ಲೆಕ್ಕಪರಿಶೋಧನಾ ವರದಿಗೆ ಕೈಗೊಳ್ಳಬೇಕಾದ ಕ್ರಮ:

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ ಅಧಿನಿಯಮ- 2018 ಕಲಂ-39(1) ರಂತೆ ವಿಶ್ವವಿದ್ಯಾಲಯವು ತನ್ನ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ, ಕಲಂ-39(2)ರಂತೆ ಸದರಿ ವಾರ್ಷಿಕ ಲೆಕ್ಕಪತ್ರಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಹಾಗೂ ಹಣಕಾಸು ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು, ಕಲಂ-39(3)ರಂತೆ ಶಾಸನಬದ್ದ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಯನ್ನು ಮಾಡಿಸಿ ಕಲಂ-39(4)ರಂತೆ, ಪರಿಶೋಧಿತ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನಾ ವರದಿಯೊಡನೆ ಹಣಕಾಸು ಸಮಿತಿ ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು. ಹಾಗೂ ಪ್ರತಿವರ್ಷ ಸೆಪ್ಟೆಂಬರ್ ಕೊನೆಯೊಳಗೆ ತಮ್ಮ ಶಿಫಾರಸ್ಸಿನೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.

ಆದರೆ, ಈ ಕಚೇರಿಯಿಂದ ಬಿಡುಗಡೆ ಮಾಡಲಾದ 2017-18ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಲೆಕ್ಕಪರಿಶೋಧನೆ ವರದಿಗಳನ್ನು ರಾಜ್ಯ ಸರ್ಕಾರಕ್ಕೆ ಇದುವರೆವಿಗೂ ಕಳುಹಿಸಿರುವುದಿಲ್ಲ. 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯು ಸ್ವೀಕೃತವಾದ ಕೂಡಲೇ ಮೇಲೆ ತಿಳಿಸಿರುವಂತೆ, ಪ್ರಸಕ್ತ ಸಾಲಿನ ಹಾಗೂ ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ಸರ್ಕಾರಕ್ಕೆ ಕೂಡಲೇ ಕಳುಹಿಸಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದೆ.

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ 2022-23ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಅಗತ್ಯವಿರುವ ದಾಖಲೆ/ಮಾಹಿತಿ/ಕಡತಗಳನ್ನು ಒದಗಿಸುವಂತೆ ಕೋರಿ, ಒಟ್ಟು 17 ವಿಚಾರಣಾ ಪತ್ರಗಳನ್ನು ಲೆಕ್ಕತನಿಖಾ ತಂಡದಿಂದ ನೀಡಲಾಗಿದ್ದು, ಎಲ್ಲಾ ವಿಚಾರಣಾ ಪತ್ರಗಳಿಗೆ ಉತ್ತರವನ್ನು/ಮಾಹಿತಿಗಳನ್ನು ಒದಗಿಸಲಾಗಿದೆ.

### 4. ವಿಶ್ವವಿದ್ಯಾನಿಲಯದ ಅಧಿಕಾರಿಗಳ ಹೆಸರು ಮತ್ತು ಪದನಾಮ:

| ಪದನಾಮ | ಹೆಸರು ಮತ್ತು ಸೇವಾ ಅವಧಿ |
|---|---|
| **ಕುಲಪತಿಗಳು** | ಪ್ರೊ. ಎನ್ಆರ್ ಭಾನುಮೂರ್ತಿ (ದಿನಾಂಕ: 01-04-2023 ರಿಂದ 31-03-2024) |
| **ಕುಲಸಚಿವರು** | 1. ಶ್ರೀಮತಿ ಶೋಭ ಬಿ, ಕೆ ಎ ಎಸ್, (ದಿನಾಂಕ: 01-04-2023 ರಿಂದ 18-07-2023)<br>2. ಡಾ॥ ಹೆಚ್ ಆರ್ ಶಿವಕುಮಾರ್, ಕೆ.ಎ.ಎಸ್ (ಪ್ರಭಾರ) (ದಿನಾಂಕ: 05-08-2023 ರಿಂದ 13-08-2023)<br>3. ಶ್ರೀಮತಿ ವಿದ್ಯಾಶ್ರೀ ಚಂದರಗಿ, ಕೆ.ಎ.ಎಸ್ (ದಿನಾಂಕ: 14-08-2023 ರಿಂದ 31.03.2024) |
| **ಪರೀಕ್ಷಾ ನಿಯಂತ್ರಕರು** | ಪ್ರೊ. ರಾಜೇಶ್ ಬಿ (ದಿನಾಂಕ: 01-04-2023 ರಿಂದ 31-03-2024) |
| **ವಿತ್ತಾಧಿಕಾರಿಗಳು** | **1.** ಶ್ರೀ ಟಿ ಎಸ್ ಪ್ರಕಾಶ್ (ದಿನಾಂಕ: 01-04-2023 ರಿಂದ 30-06-2023)<br>**2.** ಶ್ರೀ ಶಿವಕುಮಾರ್ ಹೆಚ್.ಆರ್ (ದಿನಾಂಕ: 07-08-2023 ರಿಂದ 09-08-2023)<br>**3.** ಶ್ರೀ ವಸಂತ್ ಕುಮಾರ್ ಬಿ.ವಿ (ದಿನಾಂಕ: 10-08-2023 ರಿಂದ 09-11-2023)<br>**4.** ಶ್ರೀಮತಿ ಪ್ರೇಮಲತಾ ಎಂ.ಕೆ. (ದಿನಾಂಕ: 09-11-2023 ರಿಂದ 30-11-2023)<br>**5.** ಶ್ರೀಮತಿ ವಿದ್ಯಾಶ್ರೀ ಚಂದರಗಿ (ದಿನಾಂಕ: 01-12-2023 ರಿಂದ 20-01-2024)<br>**6.** ಡಾ. ಸುನೀತಾ ಎಂ. (ದಿನಾಂಕ: 20-01-2024 ರಿಂದ 18-03-2024)<br>**7.** ಶ್ರೀ ಪ್ರಶಾಂತ್ ಕುಮಾರ್ ಎಂ.ವಿ (ದಿನಾಂಕ: 18-03-2024 ರಿಂದ 31-03-2024) |

### 4.1. ವಿದ್ಯಾರ್ಥಿಗಳ ವಿವರ

| Overall Strength for 2023-24 | | | | | | | | | | |
|---|---|---|---|---|---|---|---|---|---|---|
| **Academic year** | **5 year Integrated MSc Economics** | | | | | **2 year MSc Economics** | | **2 year MSc Financial Economics (New Course)** | | **Total** |
| | 1st year | 2nd year | 3rd year | 4th year | 5th year | 1st year | 2nd year | 1st year | 2nd year | |
| 2023-24 | 65 | 58 | 45 | 23 | 25 | 17 | 10 | 27 | 25 | **295** |

### 4.2. ವಿಶ್ವವಿದ್ಯಾಲಯಕ್ಕೆ ಮಂಜೂರಾದ/ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ:

ಡಾ. ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯವು ನೀಡಿರುವ ದೃಢೀಕೃತ ಮಾಹಿತಿಯಂತೆ ಹಾಗೂ ಕರ್ನಾಟಕ ಸರ್ಕಾರದ ನಡವಳಿ ಸಂಖ್ಯೆ: ಇಡಿ 502 ಯುಬಿವಿ 2017, ದಿ: 03.12.2018 ರನ್ವಯ 12 ಬೋಧಕೇತರ ಹಾಗೂ 11 ಬೋಧಕ ಹುದೆಗಳು ಹಾಗೂ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರತ ಸಂಖ್ಯೆ: ಇಡಿ 260 ಯುಬಿವಿ 2022, ದಿನಾಂಕ: 24.06.2024ರನ್ವಯ 40 ಬೋಧಕೇತರ ಹುದ್ದೆಗಳನ್ನು ಸೃಜನೆ ಮಾಡಲು ಅನುಮತಿ ನೀಡಲಾಗಿರುತ್ತದೆ. ವಿಶ್ವವಿದ್ಯಾಲಯಕ್ಕೆ ಮಂಜೂರಾದ/ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

| ಕ್ರ. ಸಂ | ವಿವರಗಳು | ಮಂಜೂರಾದ ಹುದ್ದೆಗಳು | | | ಭರ್ತಿಯಾಗಿರುವ ಹುದ್ದೆಗಳು | | | ಖಾಲಿ ಇರುವ ಹುದ್ದೆಗಳು | | |
|---|---|---|---|---|---|---|---|---|---|---|
| | | ಯುಜಿಸಿ | ರಾಜ್ಯ ವೇತನ | ಒಟ್ಟು | ಯುಜಿಸಿ | ರಾಜ್ಯ ವೇತನ | ಒಟ್ಟು | ಯುಜಿಸಿ | ರಾಜ್ಯ ವೇತನ | ಒಟ್ಟು |
| 1 | ಬೋಧಕ | 09 | 0 | 09 | 0 | 0 | 0 | 09 | 0 | 09 |
| 2 | ಬೋಧಕೇತರ | – | 40 | 40 | 0 | 01 | 01 | – | 39 | 39 |
| | **ಒಟ್ಟು** | **09** | **40** | **49** | **0** | **01** | **01** | **09** | **39** | **48** |

ವಿಶ್ವವಿದ್ಯಾಲಯವು ಮಂಜೂರಾದ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳು ಹಾಗೂ ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಯನ್ನು ಒಳಗೊಂಡ, ಶ್ರೇಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಸದರಿ ವಹಿಯನ್ನು ನಿರ್ವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸುವಂತೆ ತಿಳಿಸಿದೆ. ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳು, ಕುಲಸಚಿವರ ಹಾಗೂ ಹಣಕಾಸು ಅಧಿಕಾರಿಗಳ ಹುದ್ದೆಗಳು ಸರ್ಕಾರದಿಂದ ಭರ್ತಿಯಾಗಿದ್ದು, ಉಳಿದಂತೆ 2023–24ನೇ ಸಾಲಿನಲ್ಲಿ ಬೋಧಕ ಹುದ್ದೆಗಳಿಗೆ ಅಡ್‌ಹಾಕ್ ಆಧಾರದ ಮೇಲೆ 10 ಜನ ಭೋಧಕರು ಮತ್ತು 19 ಜನ ಸಂದರ್ಶಕ ಉಪನ್ಯಾಸಕರು ಹಾಗೂ ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಹೊರಗುತ್ತಿಗೆ ಆಧಾರದ ಮೇಲೆ 26 ಮಾನವ ಸಂಪನ್ಮೂಲ ಸಿಬ್ಬಂದಿಗಳು ಹಾಗೂ ಸಂಚಿತ ವೇತನದ ಆಧಾರದಲ್ಲಿ 07 ಜನ ಸಮಾಲೋಚಕರನ್ನು ನೇಮಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯವು ಸರ್ಕಾರದಿಂದ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಲುವಾಗಿ ಸೂಕ್ತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಂಡು ಸರ್ಕಾರದ ಅನುಮೋದನೆಯನ್ನು ಪಡೆದು ಹುದ್ದೆಗಳ ಭರ್ತಿಗೆ ಕ್ರಮವಹಿಸುವುದು.

### 5. ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡಿರುವ ಲೆಕ್ಕಪದ್ದತಿ:

ಡಾ. ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳ ಪ್ರಮಾಣೀಕರಣಕ್ಕಾಗಿ ಸಿದ್ದಪಡಿಸಲಾದ ವಾರ್ಷಿಕ ಲೆಕ್ಕಪತ್ರಗಳು, ವಿಶ್ವವಿದ್ಯಾಲಯದಿಂದ ಲೆಕ್ಕಪತ್ರಗಳ ಸಿದ್ಧತೆಗೆ ಅಳವಡಿಸಿಕೊಂಡಿರುವ ಕಾರ್ಯ ವಿಧಾನಗಳು, ನಿಯಮ, ವಿನಿಮಯಗಳು ಹಾಗೂ ಅನುಸರಿಸಲಾದ ಲೆಕ್ಕಪದ್ಧತಿಯ ವಿವರ ವಿಶ್ವವಿದ್ಯಾಲಯವು ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಸಲುವಾಗಿ ಯಾವುದೇ ನಿಯಮ ಮತ್ತು ಪರಿನಿಯಮಗಳನ್ನು ಸಿದ್ದಪಡಿಸಿಕೊಂಡಿರುವ ಬಗ್ಗೆ, ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

ವಿಶ್ವ ಬ್ಯಾಂಕ್‌ನ ಶಿಫಾರಸ್ಸಿನಂತೆ, ವಿಶ್ವವಿದ್ಯಾಲಯವು ನಗದು ಆಧಾರಿತ ಲೆಕ್ಕಪದ್ಧತಿಯ ಬದಲಾಗಿ, ಸಾರ್ವತ್ರಿಕವಾಗಿ ಅಂಗೀಕೃತವಾದ ದ್ವಿ–ನಮೂದು ಸಂಚಯನ ಪದ್ಧತಿಯನ್ನು ಅಳವಡಿಸಿಕೊಂಡು ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿರುತ್ತದೆ.

## 5.1. TDS Receivable ಆದಾಯ ತೆರಿಗೆ ಇಲಾಖೆಯಿಂದ ಹಿಂಪಡೆಯದಿರುವುದು ರೂ. 1,00,324.00 ಗಳ ಆಕ್ಷೇಪಣೆ:

ಆಯಾ ಸಾಲಿನ ನಿಗಧಿತ ಸಮಯದಲ್ಲಿ ಆದಾಯ ತೆರಿಗೆ ಇಲಾಖೆಗೆ ರಿಟರ್ನ್ ಸಲ್ಲಿಸಿ ಹಿಂಪಡೆದಿರುವ ಕುರಿತು ವಿವರಗಳನ್ನು, 2023–24ನೇ ಸಾಲಿನ TDS Receivable ಪರಿಶೀಲಿಸಲಾಗಿ ಅಡಾವೆ ಪತ್ರದ 'Current Assets' ನ ಷೆಡ್ಯೂಲ್ 7ರಲ್ಲಿ TDS Receivable ರೂ. 1,00,324.00 ಗಳನ್ನು ನಮೂದಿಸಲಾಗಿದ್ದು, 'IT Returns File' ಮಾಡಿರುವ ವಿವರಗಳನ್ನು ಪರಿಶೀಲಿಸಲಾಗಿ, 2023–24ನೇ ಸಾಲಿನಲ್ಲಿ 26 ಎಎಸ್ ಪ್ರಕಾರ ರೂ. 1,00,324.00 ಗಳ ಮೊತ್ತ TDS Receivable ಆಗಿರುತ್ತದೆ. ಮೇಲಿನ ಸಾಲುಗಳ 'TDS Receivable' ಮೊತ್ತವನ್ನು ಈವರೆಗೂ ಆದಾಯ ತೆರಿಗೆ ಇಲಾಖೆಯಿಂದ ಹಿಂಪಡೆದಿರುವುದಿಲ್ಲ. ಈ ಬಗ್ಗೆ ಅವರೊಂದಿಗೆ ಪತ್ರ ವ್ಯವಹಾರ ಮಾಡಿ 'TDS Receivable' ಮೊತ್ತವನ್ನು ಹಿಂಪಡೆಯಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ, ಅಲ್ಲಿಯವರೆಗೂ ಮೊತ್ತ ರೂ. 1,00,324/– ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

## 5.2. ಆರ್ಥಿಕ ಪರಿಸ್ಥಿತಿ

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯವು ದಿ:05.08.2017 ರಂದು ಕೆನರಾ ಬ್ಯಾಂಕ್, ಮಾಧವನಗರ ಶಾಖೆ, ಉಳಿತಾಯ ಖಾತೆ ಸಂಖ್ಯೆ: 0788132000010 ರಂತೆ ಬ್ಯಾಂಕ್ ಖಾತೆಯನ್ನು ತೆರೆದು 2023–24ನೇ ಸಾಲಿನಲ್ಲಿ ಆರ್ಥಿಕ ವಹಿವಾಟುಗಳನ್ನು ನಡೆಸಿ, ಲೆಕ್ಕಪತ್ರಗಳನ್ನು ನಿರ್ವಹಿಸಿದೆ. ಈ ಬಗ್ಗೆ ವಿವರಣೆಯನ್ನು ನೀಡುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01, ದಿನಾಂಕ: 19.08.2024 ರಲ್ಲಿ ಕೋರಲಾಗಿತ್ತು. ಸದರಿ ಸಾಲಿನ ಆರ್ಥಿಕ ಪರಿಸ್ಥಿತಿಯ ವಿವರಗಳು ಕೆಳಕಂಡಂತಿರುತ್ತವೆ.

**(ರೂ. ಗಳಲ್ಲಿ)**

| ವಿವರಗಳು | ನಗದು ಪುಸ್ತಕ ಪ್ರಕಾರ | ಬ್ಯಾಂಕ್ ಪಾಸ್ ಪುಸ್ತಕ ಪ್ರಕಾರ |
|---|---|---|
| **ದಿನಾಂಕ: 01.04.2023ಕ್ಕೆ ಪ್ರಾರಂಭ ಶಿಲ್ಕು** | –20,62,534.00 | 1,03,466.00 |
| **ಇತರೆ ಸ್ವೀಕೃತಿಗಳು** | 52,98,78,654.97 | 52,98,78,655.00 |
| **ಒಟ್ಟು** | **52,78,16,120.97** | **52,99,82,121.00** |
| **ಒಟ್ಟು ಪಾವತಿಗಳು** | 52,77,48,168.25 | 52,98,70,402.25 |
| **ದಿನಾಂಕ: 31.03.2024ರ ಅಂತ್ಯಕ್ಕೆ ಅಂತಿಮ ಶಿಲ್ಕು** | 67,952.72 | 111718.72 |

ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 327 ರಿಂದ 331ರ ಅನ್ವಯ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ ಹಾಗೂ ಪ್ರತಿ ತಿಂಗಳ ಕೊನೆಯ ದಿನಾಂಕದಂದು ನಗದು ಪುಸ್ತಕವನ್ನು ಮುಕ್ತಾಯ ಮಾಡಿ ಬಟವಾಡೆ ಅಧಿಕಾರಿಯು ದೃಢೀಕರಣದೊಂದಿಗೆ ನಗದು ಪುಸ್ತಕದಲ್ಲಿ ಸಹಿ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾಲಯವು 2023–24ನೇ ಸಾಲಿನಲ್ಲಿ ಚೆಕ್‌ಗಳು/ಡಿ.ಡಿ.ಗಳು/ನೇರ ಹಣ ವರ್ಗಾವಣೆ ಮುಖಾಂತರ ಹಣ ಸ್ವೀಕರಿಸಿದ್ದು, ನಗದು ಪುಸ್ತಕವನ್ನು ಪರಿಶೀಲಿಸಿದಾಗ, ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಅಂತಿಮ ಶಿಲ್ಕುಗಳಿಗೆ ರೂ.43,766.00 ಗಳ ವ್ಯತ್ಯಾಸವಿರುತ್ತದೆ. ಲೆಕ್ಕಸಮನ್ವಯ ಪೂರ್ಣಗೊಳಿಸಿದ ವಿವರಗಳು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ವಿಶ್ವವಿದ್ಯಾಲಯವು ದಿನಾಂಕ:30.03.2024 ರಂದು ಯಕ್ಷಿ ಕಮ್ಯೂನಿಕೇಷನ್ಸ್ ಇವರಿಗೆ ವಿತರಿಸಿದ ಚೆಕ್ ಸಂಖ್ಯೆ: 110424, ದಿನಾಂಕ: 01.04.2024ರಲ್ಲಿ ನಗದೀಕರಣಗೊಂಡಿರುತ್ತದೆ.

## 5.3. ವಿದ್ಯಾರ್ಥಿನಿಲಯಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆ ವಹಿವಾಟುಗಳು

ವಿದ್ಯಾರ್ಥಿನಿಲಯದ ಊಟೋಪಚಾರದ ವೆಚ್ಚದ ವಹಿವಾಟುಗಳನ್ನು ನಡೆಸುವ ಸಲುವಾಗಿ ದಿನಾಂಕ:19.11.2019ರಲ್ಲಿ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಚಂದ್ರಾ ಲೇಔಟ್ ಶಾಖೆ ಬೆಂಗಳೂರು ಇಲ್ಲಿ ಸ್ವೀಕೃತಿ **ಖಾತೆ ಸಂಖ್ಯೆ: 50100328154503** ಅನ್ನು ತೆರೆದು, ವಹಿವಾಟುಗಳನ್ನು ನಿರ್ವಹಿಸಿದ್ದು, ವಿವರಗಳು ಕೆಳಕಂಡಂತಿವೆ.

**(ರೂ. ಗಳಲ್ಲಿ)**

| ವಿವರ | ಮೊತ್ತ |
|---|---:|
| 01.04.2023 ಕ್ಕೆ ಪ್ರಾರಂಭಿಕ ಶಿಲ್ಕು | 19,81,414.80 |
| 2023-24ನೇ ಸಾಲಿನ ಸ್ವೀಕೃತಿಗಳು | 35,177.00 |
| **ಒಟ್ಟು** | 20,16,591.80 |
| 2023-24ನೇ ಸಾಲಿನ ಪಾವತಿಗಳು | 16,69,717.00 |
| 31.03.2024 ಕ್ಕೆ ಅಂತಿಮ ಶಿಲ್ಕು | 3,46,874.80 |

ಮೇಲ್ಕಂಡ ವಿದ್ಯಾರ್ಥಿನಿಲಯದ ಬ್ಯಾಂಕ್ ಖಾತೆಯಲ್ಲಿ ಬಡ್ಡಿ ರೂ. 35,177.00 ಗಳು ಸ್ವೀಕೃತವಾಗಿರುತ್ತದೆ. ಹಾಗೂ ರೂ. 16,69,717/-ಗಳ ಹಾಸ್ಟೆಲ್ ಶುಲ್ಕಗಳನ್ನು ವಿದ್ಯಾರ್ಥಿಗಳು ಸದರಿ ಖಾತೆಗೆ ತಪ್ಪಾಗಿ ಜಮೆ ಮಾಡಿದ್ದು, ದಿನಾಂಕ: 07.07.2023 ರಂದು ಕೆನರಾ ಬ್ಯಾಂಕ್, ಮಾಧವನಗರ ಶಾಖೆ, ಉಳಿತಾಯ ಖಾತೆ ಸಂಖ್ಯೆ: 0788132000010 ರಂತೆ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲಾಗಿದೆ.

## 5.4. ಲೆಕ್ಕಪರಿಶೋಧನಾ ಟಿಪ್ಪಣಿಗಳ ವಿಲೇವಾರಿ:

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿರುವ "Hand book of Instructions for the Speedy Settlement of Audit Observations, Inspection Reports Speedy disposal of Audit Paragraphs and Timely action on matter pertaining to the Public Accounts Committee and The Committee on Public Undertaking" ಎಂಬ ಮಾರ್ಗಸೂಚಿಯಂತೆ ಸೂಕ್ತ ಕ್ರಮವಹಿಸಿ ಲೆಕ್ಕತನಿಖೆ ವರದಿಗಳಲ್ಲಿಯ ಕಂಡಿಕೆಗಳ ತೀರುವಳಿಗೆ ಅಗತ್ಯ ಕ್ರಮವಹಿಸಲು ಸೂಚಿಸಿದೆ. ಕರ್ನಾಟಕ ಆಯವ್ಯಯ ಕೈಪಿಡಿಯ ನಿಯಮ-303 ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಗುರುತಿಸಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಲೆಕ್ಕಪರಿಶೋಧನಾ ಕಂಡಿಕೆಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಬಟವಾಡೆ ಅಧಿಕಾರಿಗಳು, ಹಣಕಾಸು ನಿಯಂತ್ರಣಾಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ಮುಖ್ಯಸ್ಥರದ್ದಾಗಿರುತ್ತದೆ. ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ನಿಗಾ ಇಡಲು ವಿಶ್ವವಿದ್ಯಾಲಯವು ಬಜೆಟ್ ಕೈಪಿಡಿಯ ನಿಯಮ-305ರ ಅನುಸಾರ ನಮೂನೆ-21 ರಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳಿಗೆ ಸಂಬಂಧಿಸಿದ ನಿಗಾವಹಿಯನ್ನು ನಿರ್ವಹಿಸಬೇಕಿದ್ದು, ವರ್ಷದಿಂದ ವರ್ಷಕ್ಕೆ ಲೆಕ್ಕಪರಿಶೋಧನಾ ಕಂಡಿಕೆಗಳು ಸಂಚಯವಾಗುತ್ತಾ ಹೋದಲ್ಲಿ ಹಳೆಯ ಕಂಡಿಕೆಗಳ ತೀರುವಳಿಗೆ ದಾಖಲಾತಿಗಳನ್ನು ಒದಗಿಸಿ ತೀರುವಳಿ ಮಾಡಿಸುವುದು ಶ್ರಮದಾಯಕವಾಗುತ್ತದೆ.

## 6. ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ:

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ 2017-18 ರಿಂದ 2021-22ನೇ ಸಾಲಿನವರೆಗೆ ಲೆಕ್ಕಪರಿಶೋಧನೆಯನ್ನು ಕೈಗೊಂಡು ಲೆಕ್ಕಪರಿಶೋಧನಾ ವರದಿಗಳನ್ನು ಬಿಡುಗಡೆ ಮಾಡಲಾಗಿದ್ದು, ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರ ಕೆಳಕಂಡಂತಿರುತ್ತದೆ.

(ರೂ.ಗಳಲ್ಲಿ)

| ವರ್ಷ | ಆಕ್ಷೇಪಣೆ ಕಂಡಿಕೆಗಳು | ಆಕ್ಷೇಪಣೆ ಮೊತ್ತ | ವಸೂಲಾತಿ ಕಂಡಿಕೆಗಳು | ವಸೂಲಾತಿ ಮೊತ್ತ |
|---|---|---|---|---|
| 2017–18 ರಿಂದ 2019–20 | 21 | 6,17,62,245.00 | 6 | 6,00,633.00 |
| 2020–21 | 17 | 1,27,23,911.00 | 4 | 31,67,349.00 |
| 2021–22 | 23 | 3,08,27,876.00 | 12 | 73,87,942.00 |
| 2022–23 | 6 | **3,01,09,761.00** | 5 | **78,57,690.00** |
| **ಒಟ್ಟು** | **67** | **13,54,23,793.00** | **27** | **1,90,13,614.00** |

ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಯ ಕಂಡಿಕೆಗಳ ತೀರುವಳಿಗೆ ಸಂಬಂಧಿಸಿದಂತೆ ತೀರುವಳಿ ನಿಗಾ ವಹಿಯನ್ನು ನಿರ್ವಹಿಸಿರುವುದಿಲ್ಲ. ಆದ್ದರಿಂದ, ತೀರುವಳಿ ನಿಗಾ ವಹಿಯನ್ನು ತೆರೆದು, ಪ್ರತಿವರ್ಷದ ಲೆಕ್ಕಪರಿಶೋಧನಾ ವರದಿಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಿಕೊಂಡು ಸಂಬಂಧಿಸಿದ ಕಂಡಿಕೆಗಳಿಗೆ ಸೂಕ್ತ ಹಾಗೂ ಸಮರ್ಥನೀಯವಾದ ಅನುಪಾಲನಾ ಉತ್ತರಗಳನ್ನು ದಾಖಲಿಸಿಕೊಂಡು, ಕಂಡಿಕೆಗಳು ತೀರುವಳಿಯಾದ ಪಕ್ಷದಲ್ಲಿ, ವಿವರಗಳನ್ನು ಕೆಂಪು ಶಾಯಿಯಲ್ಲಿ ನಮೂದಿಸಿಕೊಂಡು ದೃಢೀಕರಣದೊಂದಿಗೆ ವಹಿಯನ್ನು ನಿರ್ವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ/20/ಯುಎನ್ಇ/2021/ಬೆಂಗಳೂರು ದಿನಾಂಕ: 09.11.2021ರ ಆದೇಶದ ರೀತ್ಯಾ ಅಡ್‌ಹಾಕ್ ಸಮಿತಿಯನ್ನು ರಚಿಸಿಕೊಂಡು ಲೆಕ್ಕಪರಿಶೋಧನಾ ಕಂಡಿಕೆಗಳ ತೀರುವಳಿಗೆ ಆದೇಶದ ರೀತ್ಯಾ ಕ್ರಮವಹಿಸುವುದು.

## 7. ಆಯವ್ಯಯ ಅಂದಾಜುಗಳು:

ಡಾ. ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯದ ಅಧಿನಿಯಮ–2018, ಕಲಂ–40 (1) ರನ್ವಯ, ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ದಿನಾಂಕದ ಮೊದಲು ಹಣಕಾಸು ಅಧಿಕಾರಿಯ ನೆರವಿನೊಂದಿಗೆ, ಮುಂಬರುವ ವರ್ಷಕ್ಕಾಗಿ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಹಣಕಾಸು ಸಮಿತಿಯ ಮೂಲಕ ಅವುಗಳನ್ನು ಪರಿಶೀಲಿಸಿ ದಿನಾಂಕ: 08–12–2022 ರಂದು ನಡೆದ 02ನೇ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ.

ಸದರಿ ಅಧಿನಿಯಮದ, ಕಲಂ–40(2) ರನ್ವಯ, ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು, ಬಜೆಟ್‌ನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚವನ್ನು ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಬಜೆಟ್‌ನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ಹಣಕಾಸು ಸಮಿತಿಗೆ ಅದರ ಪರಿಗಣನೆ ಮತ್ತು ಸಲಹೆಗಾಗಿ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕದ್ದು.

ಸದರಿ ಅಧಿನಿಯಮದ, ಕಲಂ–40(3) ರನ್ವಯ, ವಿಶ್ವವಿದ್ಯಾಲಯದ ಬಜೆಟ್ ಅಂದಾಜನ್ನು, ತನ್ನ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದು ಒಳಗೊಂಡಂತೆ ರಾಜ್ಯ ಸರ್ಕಾರ ಮತ್ತು ಎಲ್ಲಾ ಇತರೆ ಮೂಲಗಳಿಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು, ಆದಾಗ್ಯೂ, ಪೂರಕ ಬಜೆಟನ್ನು, ಹೆಚ್ಚಿನ ಅನುದಾನಗಳ ನಿರೀಕ್ಷೆಯಿಂದ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಇಡಬಹುದು. ಆದರೆ, ಈ ಬಗ್ಗೆ ಯಾವುದೇ ವೆಚ್ಚವನ್ನು, ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ಭರಿಸತಕ್ಕದ್ದಲ್ಲ.

ಸದರಿ ಅಧಿನಿಯಮದ, ಕಲಂ–40(4) ರನ್ವಯ, ವಿಶ್ವವಿದ್ಯಾಲಯವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಮೀಸಲಿಟ್ಟ ನಿಧಿಗಳನ್ನು ಇತರೆ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಗೆಗಳನ್ನು ಒಳಗೊಳ್ಳುವಂಥ ಯಾವುದೇ ಯೋಜನೆಗಳನ್ನು ಅಥವಾ ಪ್ರಾಯೋಜಿತ ಪ್ರಾಧಿಕಾರಗಳಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದಲ್ಲ.

**8. ವಿಶ್ವವಿದ್ಯಾಲಯದ ಸ್ವೀಕೃತಿಗಳು:**

ಬೆಂಗಳೂರು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯವು ತನ್ನ ಉದ್ದೇಶಿತ ಉನ್ನತ ಶಿಕ್ಷಣ ಪ್ರಸರಣಾ ಕಾರ್ಯಚಟುವಟಿಕೆಗಳಿಗಾಗಿ ಅಗತ್ಯವಿರುವ ಹಣಕಾಸು ನಿಧಿಗಳನ್ನು ಬೆಂಗಳೂರು ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ 2018ರ ಅಧ್ಯಾಯ–6, ಕಲಂ–37(1) ರಿಂದ 37(4) ರನ್ವಯ ನಿರ್ವಹಿಸಲಾಗುತ್ತಿದ್ದು, ವಿಷಯಾಧಾರಿತವಾಗಿ ವರ್ಗೀಕರಿಸಲಾಗಿದೆ. ಈ ನಿಧಿಗಳಿಗೆ ರಾಜಸ್ವ ಮೂಲಗಳು ಪ್ರಮುಖವಾಗಿ ವಿಶ್ವವಿದ್ಯಾಲಯಗಳ ಅನುದಾನ ಆಯೋಗ ಅಥವಾ ಕೇಂದ್ರ ಸರ್ಕಾರವು ನೀಡುವ ಯಾವುದೇ ವಂತಿಗೆ ಅಥವಾ ಅನುದಾನ, ರಾಜ್ಯ ಸರ್ಕಾರವು ನೀಡುವ ಯಾವುದೇ ವಂತಿಗೆ ಅಥವಾ ಅನುದಾನ, ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಮರಣಶಾಸನ ಮೂಲಕವಾಗಿ ದೊರೆತ ಸ್ವತ್ತುಗಳು, ದೇಣಿಗೆಗಳು, ದತ್ತಿಗಳು ಅಥವಾ ಇತರೆ ಅನುದಾನಗಳು, ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ಮರಣಶಾಸನ ಮೂಲಕವಾಗಿ ದೊರೆತ ಸ್ವತ್ತುಗಳು. ವಿದೇಶಿ ಸರ್ಕಾರಗಳಿಂದ/ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಸ್ವೀಕರಿಸಿದ ಯಾವುದೇ ವಂತಿಗೆಗಳು/ದತ್ತಿಗಳು, ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳು ಹಾಗೂ ಮೂಲದಿಂದ ಸ್ವೀಕರಿಸಿದ ಆದಾಯಗಳನ್ನು ಒಳಗೊಂಡಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ರ, ಕಲಂ–46(2) ರನ್ವಯ ವಿಶ್ವವಿದ್ಯಾಲಯದ ನಿಧಿಗಳನ್ನು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ 1934 ರಲ್ಲಿ ಪರಿಭಾಷಿಸಿರುವಂತೆ, ಅನುಸೂಚಿತ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳು (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ–1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕ್‌ನಲ್ಲಿ ಇಡತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ನಿಧಿಗಳು ಮತ್ತು ಆದಾಯವನ್ನು ವಿಶ್ವವಿದ್ಯಾಲಯದ ಉದ್ದೇಶಗಳನ್ನು ಈಡೇರಿಸಲು ಮಾತ್ರವೇ ಉಪಯೋಗಿಸತಕ್ಕದ್ದು.

ವಿಶ್ವವಿದ್ಯಾಲಯದ ನಿಧಿಗಳನ್ನು ಬ್ಯಾಂಕ್‌ಗಳ ಮೂಲಕ ವ್ಯವಸ್ಥಿತ ನಿರ್ವಹಣೆಯನ್ನು, ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ **ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ. 5 ಟಿಎಆರ್ 2017 ದಿನಾಂಕ: 30.01.2017**ರ ಮಾರ್ಗಸೂಚಿಯಲ್ಲಿ ನೀಡಿರುವಂತೆ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವುದು ಹಾಗೂ **ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ. 08 ಟಿಎಆರ್ 2020 ದಿನಾಂಕ:12.03.2020**ರ ಮಾರ್ಗಸೂಚಿಯನ್ವಯ ಹೂಡಿಕೆಗಳನ್ನು ನಿರ್ವಹಿಸಬೇಕಾಗಿರುತ್ತದೆ.

ವಿಶ್ವವಿದ್ಯಾಲಯವು ಒದಗಿಸಿದ ಹಾಗೂ ಬ್ಯಾಂಕ್ ಪಾಸ್‌ಶೀಟ್/ಸ್ವೀಕೃತಿ ಮತ್ತು ಪಾವತಿ ತಃಖ್ತೆ ಪ್ರಕಾರ ವಿಶ್ವವಿದ್ಯಾಲಯದ ನಿಧಿಗೆ ಈ ಕೆಳಕಂಡಂತೆ ಮೊತ್ತವು ಜಮೆಯಾಗಿರುತ್ತದೆ.

| **ಕ್ರ..ಸಂ** | **ಮೂಲಗಳ ವಿವರ** | **ಸ್ವೀಕೃತವಾದ ಮೊತ್ತ (ರೂ.ಗಳಲ್ಲಿ)** |
|---|---|---|
| 1 | ರಾಜ್ಯ ಸರ್ಕಾರದ ಅನುದಾನ | 0.00 |
| 2 | ಪ್ರವೇಶಾತಿ ಶುಲ್ಕ | 3,12,87,803.00 |
| 3 | ಪರೀಕ್ಷಾ ಶುಲ್ಕ | 7,39,758.00 |
| 4 | ನಿಶ್ಚಿತ ಠೇವಣಿಗಳ ಹೂಡಿಕೆ ಹಿಂಪಡೆತ | 66,47,15,616.70 |
| 5 | ನಿಶ್ಚಿತ ಠೇವಣಿಗಳ ಬಡ್ಡಿ ಮೊತ್ತ | 2,03,16,777.00 |
| 6 | ಉಳಿತಾಯ ಖಾತೆಯ ಬ್ಯಾಂಕ್ ಬಡ್ಡಿ | 79,550.00 |
| 7 | ಇತರೆ ಸ್ವೀಕೃತಿಗಳು (ಅರ್ಜಿ ಶುಲ್ಕ, ವಿಳಂಬ ಶುಲ್ಕ ಮತ್ತು ದಂಡ ಮಾಹಿತಿ ಹಕ್ಕು ಶುಲ್ಕ) | 5,70,100.00 |
| | **ಒಟ್ಟು** | **71,77,09,604.70** |

**8.1. ವಿಶ್ವವಿದ್ಯಾಲಯವು ಹೊಂದಿರುವ ನಿಶ್ಚಿತ ಠೇವಣಿಗಳ ವಿವರಗಳು.**

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ ಇವರು 2023–24ನೇ ಸಾಲಿನ ನಿಶ್ಚಿತ ಠೇವಣಿಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯವು ಒದಗಿಸಿದ ಹೂಡಿಕೆ ವಹಿಯನ್ನು ಪರಿಶೀಲಿಸಿದಾಗ, ಕೇವಲ ಹೊಸದಾಗಿ ಹೂಡಿಕೆ ಮಾಡಲಾದ ನಿಶ್ಚಿತ ಠೇವಣಿಗಳ ಮೊತ್ತಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡಿದ್ದು, ಹೂಡಿಕೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ವಹಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದೆ. ಆದರೂ, ಸಹ ವಿಶ್ವವಿದ್ಯಾಲಯವು ದೃಢೀಕರಿಸಿ ಒದಗಿಸಿರುವ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಬ್ಯಾಂಕ್ ಪಾಸ್ ಶೀಟ್‌ಗಳನ್ನು ಪರಿಶೀಲಿಸಿ, ವಾಸ್ತವವಾಗಿ ಕಂಡುಬಂದ ಅಂಕಿ–ಅಂಶಗಳನ್ವಯ 2023–24ನೇ ಸಾಲಿನಲ್ಲಿ ಹೊಂದಿರುವ ನಿಶ್ಚಿತ ಠೇವಣಿ ಹೂಡಿಕೆಗಳ ವಿವರಗಳು ಕೆಳಕಂಡಂತಿರುತ್ತವೆ.

**(ರೂ.ಗಳಲ್ಲಿ)**

| | |
|---|---|
| ಪ್ರಾರಂಭ ಶಿಲ್ಕು (ವಾರ್ಷಿಕ ಲೆಕ್ಕಪತ್ರಗಳನ್ವಯ) | 483187309.00 |
| 2023–24ನೇ ಸಾಲಿನ ಹೂಡಿಕೆಗಳು (ನಿಶ್ಚಿತ ಠೇವಣಿ ಹಾಗೂ Flexi ಸೇರಿ) | 271891702.25 |
| ಸ್ವೀಕೃತಿ (ಬಡ್ಡಿ ಮೊತ್ತ) | 132212532.72 |
| **ಒಟ್ಟು** | **887291543.97** |
| 2023–24ನೇ ಸಾಲಿನಲ್ಲಿ ನಿಶ್ಚಿತ ಠೇವಣಿಯನ್ನು ಹಿಂಪಡೆದಿರುವುದು | 664715616.70 |
| ತೆರಿಗೆ ಕಡಿತ | 0.00 |
| ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ವಾಸ್ತವಿಕ ಅಂತಿಮ ಶಿಲ್ಕು ರೂ: | **222575927.27** |
| ವಾರ್ಷಿಕ ಲೆಕ್ಕಪತ್ರಗಳನ್ವಯ ಅಂತಿಮ ಶಿಲ್ಕು ರೂ: | **222575927.27** |
| ವ್ಯತ್ಯಾಸದ ಮೊತ್ತ ರೂ: | **0.00** |

**ವಿಶ್ವವಿದ್ಯಾಲಯವು 2022–23ನೇ ಸಾಲಿನಲ್ಲಿ ಹೂಡಿಕೆ ಮಾಡಿರುವ ಹಾಗೂ ಹಿಂಪಡೆದ ನಿಶ್ಚಿತ ಠೇವಣಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.**

ವಿಶ್ವವಿದ್ಯಾಲಯವು ಕೆನರಾ ಬ್ಯಾಂಕ್, ಮಾಧವನಗರ ಶಾಖೆ ಹಾಗೂ ಪದ್ಮನಾಭನಗರ ಶಾಖೆಯಲ್ಲಿ ಹೂಡಿಕೆ ಮಾಡಿರುವುದು ಕಂಡುಬಂದಿರುತ್ತದೆ. **ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಡಿ 38 ಟಿಎಆರ್ 2018 ದಿ:27.08.2018** ರಲ್ಲಿ ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಹಾಗೂ ಸ್ವಾಯತ್ತ ಸಂಸ್ಥೆಗಳು ತಮ್ಮಲ್ಲಿರುವ ಹೆಚ್ಚುವರಿ ನಿಧಿಯನ್ನು (Excess Fund) ಹೂಡಿಕೆ ಮಾಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ವಿವರಿಸಲಾಗಿದ್ದು, ಸದರಿ ಸುತ್ತೋಲೆಯ ಕ್ರಮ ಸಂಖ್ಯೆ 05 ರಂತೆ ಮೇಲ್ಕಂಡ ಸಂಸ್ಥೆಗಳು ರೂ. 1.00 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಮೊತ್ತವನ್ನು ಹೂಡಿಕೆ ಮಾಡುವಾಗ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಕರೆದು ಹೆಚ್ಚು ಬಡ್ಡಿ ಮೊತ್ತವನ್ನು ನಮೂದಿಸಿರುವ ಬ್ಯಾಂಕುಗಳ ವಿವರಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿ, ತದನಂತರ ಹೂಡಿಕೆ ಮಾಡಲಾಗಿರುತ್ತದೆ.

**8.2. ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಬರಬೇಕಾದ ಅನುದಾನ ಸ್ವೀಕೃತವಾಗದಿರುವ ಬಗ್ಗೆ:–**

2023–24ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವು ವಿಶ್ವವಿದ್ಯಾಲಯಕ್ಕೆ ಸ್ವೀಕರಿಸಿರುವುದಿಲ್ಲ. ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಇಡಿ 61 ಯುಬಿಬಿ 2016 ದಿನಾಂಕ:16.02.2017ರಲ್ಲಿ ಸದರಿ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ರೂ. 150.00 ಕೋಟಿಗಳ ಮೂಲಧನವನ್ನು (ಕಾರ್ಪಸ್ ನಿಧಿ) ನಿಗಧಿಪಡಿಸಲಾಗಿದ್ದು, ರೂ. 75 ಕೋಟಿಗಳ ಹಣವನ್ನು ಮುಂದಿನ 05 ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ಸರ್ಕಾರದಿಂದ ಬಿಡುಗಡೆಗೊಳಿಸಲಾಗುವುದೆಂದು ತಿಳಿಸಲಾಗಿದೆ. ಮುಂದುವರೆದು, 2018–19ನೇ ಸಾಲಿನಿಂದ 05 ವರ್ಷಗಳ ಕಾಲಮಿತಿಯೊಳಗೆ ಪ್ರತಿ ವರ್ಷ ರೂ. 10.00 ಕೋಟಿಗಳಂತೆ ಆವರ್ತಕ ಅನುದಾನವನ್ನು ಬಿಡುಗಡೆಗೊಳಿಸಲಾಗುವುದಾಗಿ ತಿಳಿಸಲಾಗಿದೆ.

ಆದರೆ ಮೇಲ್ಕಂಡಂತೆ, ಯಾವುದೇ ಅನುದಾನಗಳು ಸರ್ಕಾರದಿಂದ ಬಿಡುಗಡೆಯಾಗಿರುವುದಿಲ್ಲ. ಇದರಿಂದ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯು ತುಂಬಾ ಹದಗೆಡುವ ಸಾಧ್ಯತೆಯಿರುತ್ತದೆ. ಪ್ರಸ್ತುತ ವಿಶ್ವವಿದ್ಯಾಯವು ಕೇವಲ

ವಿದ್ಯಾರ್ಥಿಗಳಿಂದ ಸ್ವೀಕೃತವಾಗುವ ಶುಲ್ಕಗಳು ಹಾಗೂ ನಿಶ್ಚಿತ ಠೇವಣಿಯಿಂದ ಅರ್ಜಿತವಾದ ಬಡ್ಡಿ ಮೊತ್ತದಿಂದ ದೈನಂದಿನ ವೆಚ್ಚಗಳನ್ನು ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆಯಾಗದಿದ್ದಲ್ಲಿ ವಿಶ್ವವಿದ್ಯಾಲಯದ ನಿರ್ವಹಣೆಯು ಕಷ್ಟಸಾಧ್ಯವಾಗುತ್ತದೆ. ಇದರಿಂದ ವಿಶ್ವವಿದ್ಯಾಲಯದ ಸ್ಥಾಪನೆಯ ಉದ್ದೇಶವು ಸಫಲವಾಗುವುದಿಲ್ಲ.

**8.3. ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ಸುಧಾರಣೆಗಾಗಿ ಲೆಕ್ಕಪರಿಶೋಧನೆಯ ಶಿಫಾರಸ್ಸು:–**

ಬೆಂಗಳೂರು ಡಾ. ಬಿ. ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (BASE) ವಿಶ್ವವಿದ್ಯಾಲಯವು ದಿನಾಂಕ: 30–10–2019 ರಿಂದ ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದು, 2017–18ನೇ ಸಾಲಿನಿಂದ ಪ್ರವೇಶಾತಿಯು ಆರಂಭವಾಗಿರುತ್ತದೆ. ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದ್ದು, ಡಾ. ಬಿ.ಆರ್ ಅಂಬೇಡ್ಕರ್ ಅರ್ಥ ಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯದ ಕಾಯ್ದೆ 2018ರ ಅನುಸೂಚಿ 9 ರಲ್ಲಿ ಸೂಚಿಸಿರುವಂತೆ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಿಲಯಗಳಲ್ಲಿ ವಸತಿ ಸೌಲಭ್ಯ ನೀಡಲಾಗುತ್ತಿದೆ.

ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 3 ಕೋರ್ಸ್‌ಗಳಿದ್ದು ಎಲ್ಲಾ ಬಾಲಕರು ಮತ್ತು ಬಾಲಕಿಯರು ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುತ್ತ ವ್ಯಾಸಂಗ ಮಾಡುತ್ತಿರುತ್ತಾರೆ. ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ 2ನೇ ಹಂತದ ವಿದ್ಯಾರ್ಥಿನಿಲಯದ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. 2023–24ನೇ ಸಾಲಿನಲ್ಲಿ ಒಟ್ಟು 307 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದು ವ್ಯಾಸಂಗ ಮಾಡುತ್ತಿದ್ದು, ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ Academic capacity ಪ್ರಕಾರ 700 ವಿದ್ಯಾರ್ಥಿಗಳಿಗೆ ಪ್ರತಿವರ್ಷ ಪ್ರವೇಶಾತಿ ನೀಡಬಹುದಾಗಿರುತ್ತದೆ. ವಿಶ್ವವಿದ್ಯಾಲಯದ ಕಾಯ್ದೆಯ ಅನುಸೂಚಿ – 9 ರನ್ವಯ ವಿದ್ಯಾರ್ಥಿನಿಲಯವನ್ನು ಉಪಯೋಗಿಸುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾತಿ ಕಲ್ಪಿಸಿರುವುದರಿಂದ ವಿಶ್ವವಿದ್ಯಾಲಯದ Academic capacity ಗೆ ತಕ್ಕಂತೆ ಪ್ರವೇಶಾತಿ ಒದಗಿಸದೇ ಇರುವುದರಿಂದ ವಿಶ್ವವಿದ್ಯಾಲಯಕ್ಕೆ ಶೇ. 50 ರಷ್ಟು ಆದಾಯ (ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕಗಳಿಂದ ಬರುವ) ಪ್ರತಿವರ್ಷ ನಷ್ಟವಾಗಿರುತ್ತಿದೆ. ಕಂಡಿಕೆ ಸಂಖ್ಯೆ: 8.2 ರಲ್ಲಿ ತಿಳಿಸಿರುವಂತೆ, ಸರ್ಕಾರವು ನಿಗಧಿಪಡಸಿದಂತೆ ಅನುದಾನವನ್ನು ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡದೇ ಇರುವುದರಿಂದ ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆ ಕಷ್ಟಸಾಧ್ಯವಾಗಿದೆ. ಆದ್ದರಿಂದ, ಸರ್ಕಾರವು ಸೂಕ್ತ ಗಮನಹರಿಸಿ, ವಿಶ್ವವಿದ್ಯಾಲಯದ ಕಾಯ್ದೆ 2018ರ ಅನುಸೂಚಿ–9ಕ್ಕೆ ಸೂಕ್ತ ತಿದ್ದುಪಡಿ ಮಾಡಿ ವಸತಿ ಸಹಿತ ಪ್ರವೇಶಾತಿ ಷರತ್ತಿಗೆ ವಿನಾಯಿತಿ ನೀಡಿದ್ದಲ್ಲಿ ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ಆದಾಯ ಲಭ್ಯವಾಗಿ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ

**9. ಸಂಯೋಜನಾ ಶುಲ್ಕ:**

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ ಅಧಿನಿಯಮ–2018ರ ಕಲಂ–03 ರಂತೆ ಬೆಂಗಳೂರು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯ ಎಂದು ಕರೆಯಲಾಗುವ ಏಕಾತ್ಮಕ, ಸಂಯೋಜನೆಯನ್ನು ನೀಡದಿರುವ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಆದ್ದರಿಂದ, ವಿಶ್ವವಿದ್ಯಾಲಯವು ಯಾವುದೇ ಕಾಲೇಜುಗಳಿಗೆ ಸಂಯೋಜನೆಯನ್ನು ನೀಡಿರುವುದಿಲ್ಲ.

**9.1 ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕಗಳನ್ನು ಕಡಿಮೆ ವಸೂಲಿಸಿರುವುದು ರೂ 4,68,856.00 ಗಳ ವಸೂಲಾತಿ.**

ಡಾ. ಬಿ.ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ 2023–24ನೇ ಸಾಲಿನ ಲೆಕ್ಕಪರಿಶೋಧನೆ ಚಾಲ್ತಿಯಲ್ಲಿದ್ದು, ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳ ಪ್ರವೇಶ ಶುಲ್ಕಗಳನ್ನು ಪರಿಶೀಲಿಸಲಾಗಿ, ಪ್ರವೇಶ ಪಡೆದ 12 ಜನ ವಿದ್ಯಾರ್ಥಿಗಳಿಂದ ಕಡಿಮೆ ವಸೂಲಿಸಿದ ಮೊತ್ತ ರೂ. 9,45,206.**00** ಗಳಗಳಾಗಿದ್ದು, ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ವಿಚಾರಣಾ ಪತ್ರ ಸಂಖ್ಯೆ. 15, ದಿನಾಂಕ: 29.08.2024 ರಂದು ಕೋರಲಾಗಿರುತ್ತದೆ. ಅದರಂದತೆ ವಿಶ್ವವಿದ್ಯಾಲಯವು ದಿನಾಂಕ: 28–08–2023 ರಂದು ಹಾಗೂ ಪುನರ್‌ಪರಿಶೀಲನಾ ದಿನಾಂಕ:20.09.2024ರಂದು ಸಲ್ಲಿಸಲಾದ ಅನುಸರಣೆಯಲ್ಲಿ ಒಟ್ಟು ಮೂವರು ವಿದ್ಯಾರ್ಥಿಗಳು ವಿಶ್ವವಿದ್ಯಾಲಯವನ್ನು ತೊರೆದಿದ್ದು, ಉಳಿದ ಇಬ್ಬರು ವಿದ್ಯಾಥಿಗಳಿಂದ ರೂ. 2,24,200.00 ಗಳನ್ನು ವಸೂಲಿಸಲಾಗಿರುವುದನ್ನು

ಪರಿಶೀಲಿಸಲಾಗಿದ್ದು, ಬಾಕಿ ಉಳಿದ ಕೆಳಕಂಡ 07 ಜನ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕಗಳನ್ನು ಕಡಿಮೆ ವಸೂಲಿಸಿರುವುದು ರೂ 4,68,856.00 ಗಳನ್ನು ವಸೂಲಾತಿಯಲ್ಲಿಡಲಾಗಿದೆ. ವಿವರಗಳು ಕೆಳಕಂಡಂತಿರುತ್ತವೆ.

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ಕೋರ್ಸ್ ವಿವರ | ಪಾವತಿಸಬೇಕಾದ ಪ್ರವೇಶ ಶುಲ್ಕ | ಪಾವತಿಸಿದ ಶುಲ್ಕ | ಬಾಕಿ ಶುಲ್ಕ |
|---|---|---|---|---|---|
| 1 | Aisha Naz Khandakar | Msc 2 yrs Sem 1 | 122400 | 70000 | 52400 |
| 2 | Rajiv Kumar Ghosh | Msc 2 yrs Sem 1 | 122400 | 47400 | 75000 |
| 3 | Bhojaraj Shivalal Rathod | Msc 5 yrs Sem III | 123390 | 0 | 123390 |
| 4 | Ruchitha M | Msc 5 yrs Sem III | 111900 | 12000 | 99900 |
| 5 | Anurag S Sony | Msc 5 yrs Sem V | 170216 | 105150 | 65066 |
| 6 | Harsh Singhania | Msc 5 yrs Sem V | 147700 | 109600 | 38100 |
| 7 | Shreyas Singh | Msc 5 yrs Sem VII | 124600 | 109600 | 15000 |
| | | **Total** | **922606** | **453750** | **468856** |

ಮೇಲ್ಕಂಡಂತೆ ಮೊತ್ತ ರೂ. 4,68,856.00 ಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ತಿಳಿಸಿದೆ.

**10. ವಿಶ್ವವಿದ್ಯಾನಿಲಯದ ನಿಧಿ:**

ಡಾ. ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ಅಧಿನಿಯಮ–2018ರ ಅಧ್ಯಾಯ–6, ಕಲಂ–37ರ ಪ್ರಕಾರ ವಿಶ್ವವಿದ್ಯಾನಿಲಯವು ತನ್ನದೇ ಆದ ನಿಧಿಯನ್ನು ಹೊಂದಿದ್ದು, ವಿಶ್ವವಿದ್ಯಾಲಯಗಳ ಅನುದಾನ ಆಯೋಗ ಅಥವಾ ಕೇಂದ್ರ ಸರ್ಕಾರವು ನೀಡುವ ಯಾವುದೇ ವಂತಿಗೆ ಅಥವಾ ಅನುದಾನ, ರಾಜ್ಯ ಸರ್ಕಾರವು ನೀಡುವ ಯಾವುದೇ ವಂತಿಗೆ ಅಥವಾ ಅನುದಾನ, ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಮರಣಶಾಸನ ಮೂಲಕವಾಗಿ ದೊರೆತ ಸ್ವತ್ತುಗಳು, ದೇಣಿಗೆಗಳು, ದತ್ತಿಗಳು ಅಥವಾ ಇತರೆ ಅನುದಾನಗಳು, ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತುಗಳು. ವಿದೇಶಿ ಸರ್ಕಾರಗಳಿಂದ/ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಸ್ವೀಕರಿಸಿದ ಯಾವುದೇ ವಂತಿಗೆಗಳು ದತ್ತಿಗಳು, ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳು ಹಾಗೂ ಇತರೆ ಮೂಲದಿಂದ ಸ್ವೀಕರಿಸಿದ ಆದಾಯಗಳನ್ನು ಒಳಗೊಂಡಿರುತ್ತದೆ. ಈ ರೀತಿ ಸ್ವೀಕರಿಸಲಾದ ಅನುದಾನಗಳ ವಿವರಗಳನ್ನು ಒದಗಿಸುವಂತೆ, **ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 01 ದಿನಾಂಕ: 19.08.2024 ರಲ್ಲಿ** ಕೋರಲಾಗಿತ್ತು. ವಿಶ್ವವಿದ್ಯಾಲಯವು ಒದಗಿಸಿದ ಹಾಗೂ ಬ್ಯಾಂಕ್ ಪಾಸ್‌ಶೀಟ್/ಸ್ವೀಕೃತಿ ಮತ್ತು ಪಾವತಿ ತಃಖ್ತೆ ಪ್ರಕಾರ ವಿಶ್ವವಿದ್ಯಾಲಯದ ನಿಧಿಗೆ ಜಮೆಯಾಗಿರುವ ಮೊತ್ತದ ವಿವರ ಈಗಾಗಲೇ ಕಂಡಿಕೆ ಸಂಖ್ಯೆ 08 ರಲ್ಲಿ ನಮೂದಿಸಲಾಗಿದೆ.

**11. ವೆಚ್ಚಗಳ ಮೇಲೆ ನಿಯಂತ್ರಣ:**

ಪರಿಣಾಮಕಾರಿಯಾದ ವೆಚ್ಚಗಳ ನಿಯಂತ್ರಣ ಕಾರ್ಯದಲ್ಲಿ ವಿಶ್ವವಿದ್ಯಾಲಯದ ವಿಭಾಗಗಳ ಮಾಸಿಕ ವೆಚ್ಚ ತಃಖ್ತೆಗಳು, ವೆಚ್ಚಗಳು ಹಾಗೂ ಆಯವ್ಯಯ ಹಂಚಿಕೆಗಳು, ಮತ್ತು ಬ್ಯಾಂಕ್ ಖಾತೆಗಳೊಡನೆ ಅವುಗಳ ನಿಯಂತ್ರಣ ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 301(8) ರನ್ವಯ, ಮಾಸಿಕ ವೆಚ್ಚ ತಃಖ್ತೆಗಳನ್ನು ತಯಾರಿಸುವುದು ಹಾಗೂ ಪರಿಣಾಮಕಾರಿಯಾದ ವೆಚ್ಚಗಳ ನಿಯಂತ್ರಣಕ್ಕೆ, ಲೆಕ್ಕಪತ್ರ ನಿರ್ವಹಣೆಯ ತತ್ವಗಳನ್ವಯ ನಿಗಧಿತ ನಮೂನೆಯಾದ ಸ್ವೀಕೃತಿ ಮತ್ತು ಪಾವತಿ ತಃಖ್ತೆ, ಆದಾಯ ಮತ್ತು ಖರ್ಚು ತಃಖ್ತೆ ಹಾಗೂ ಅಡಾವೆ ಪತ್ರಗಳನ್ನು ನಿರ್ವಹಿಸಲು ಸೂಚಿಸಿದೆ.

**12. ದುರ್ವಿನಿಯೋಗದ ಪ್ರಕರಣಗಳು:**

ವಿಶ್ವವಿದ್ಯಾಲಯವು ನೀಡಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಯಾವುದೇ ಕಂಡಿಕೆ ಇರುವುದಿಲ್ಲ.

**13. ನಿರರ್ಥಕ/ಅತಿಯಾದ ವೆಚ್ಚ:**

**13.1. M/s. E & Y ಸಂಸ್ಥೆಗೆ ಸಲಹಾ ವೆಚ್ಚ ಪಾವತಿಸಿರುವ ಬಗ್ಗೆ ಮೊತ್ತ ರೂ. 45,60,000.00 ಗಳ ಆಕ್ಷೇಪಣೆ.**

2023–24ನೇ ಸಾಲಿನ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯಲ್ಲಿ M/s. E & Y ಎಂಬ ಖಾಸಗಿ ಸಂಸ್ಥೆಯನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸಲಹೆ ತೆಗೆದುಕೊಳ್ಳಲು ನೇಮಿಸಿಕೊಂಡಿರುವುದು ಕಂಡುಬಂದಿದ್ದು, ಸದರಿ ಸಂಸ್ಥೆಯವರು ಈ ಕೆಳಕಂಡಂತೆ ಸಲಹೆಗಳನ್ನು ನೀಡಿರುತ್ತಾರೆ.

We have focused on following priority areas in this report:

1. Improving research ecosystem – This intervention aims to give a perspective on how the institutional ecosystem for research at the BASE can be improved by the establishing a Research and Development Cell, developing a research policy and exploring ways to increase number of publication, citation and research income. A phase wise plan for each of the parameters has been elaborated. The cost and means to phase out the execution has also been elaborated. This intervention has been elaborated in chapter 1.
2. Focus on Internationalization – With the plan of positioning BASE on a global map, a comprehensive plan for internationalization for the next one year has been presented that focuses on interventions such as establishment of office of International Relations, developing Internationalization policy, Outreach program and improving international faculty and student numbers. This intervention has been elaborated in chapter 2.
3. Enhancing Academic Reputation – Through this intervention we have focused on various aspects of improving the overall academic reputation of the university. Some of the indicators focused upon include ways and means to meet NIRF and NAAC accreditations. Improving faculty student ratio, capacity building and enabling faculty trainings. This intervention has been elaborated in chapter 3.
4. Collaborations – Academic collaborations and consultancy projects play a very crucial role in simulating the growth of the university and enable sharing of knowledge, expertise, skills and experience across the board. We have elaborated on various avenues for collaborations with a one year horizon. This intervention has been elaborated in chapter 4.

The report also takes into account various targets that would eventually help establish BASE as a Global School of Eminence. These targets targets have been arrived after considering the constraints that the university faces. However, the university shall have the liberty to modify these targets during the strategy implementation stage in order to align its functioning with the prevalent economic and academic situation in the state, the country, as well as across the world.

ಮೇಲ್ಕಂಡಂತೆ, ವಿಶ್ವವಿದ್ಯಾಲಯಕ್ಕೆ ಪ್ರಸ್ತುತ NAAC accreditations ಇಲ್ಲದಿರುವುದರಿಂದ ವಿಶ್ವವಿದ್ಯಾಲಯಕ್ಕೆ ಅನೇಕ ಪ್ರಾಜೆಕ್ಟ್‌ಗಳನ್ನು Funding Agency ಗಳು ನೀಡದಿರುವುದು ತಿಳಿದ ವಿಷಯವಾಗಿದೆ. ಸದರಿ ವಿಷಯದ ಬಗ್ಗೆ ಮಾಹಿತಿ ಇದ್ದರೂ ಸಹ, ಸಂಸ್ಥೆಗೆ 2023–24ನೇ ಸಾಲಿನಲ್ಲಿ ಸಲಹೆಗಾಗಿ ಚೆಕ್ ಸಂಖ್ಯೆ: 347616, ದಿನಾಂಕ: 20.04.2023 ರಲ್ಲಿ ರೂ. 45,60,000.00 ಗಳನ್ನು ಪಾವತಿ ಮಾಡಿರುವುದು ಕಂಡುಬಂದಿದೆ. E & Y ಸಂಸ್ಥೆಯ ಸಲಹೆಗಳು ವಿಶ್ವವಿದ್ಯಾಲಯಕ್ಕೆ ಯಾವುದೇ ಉಪಯೋಗ ಆಗದಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಆದ್ದರಿಂದ, ಸದರಿ ವೆಚ್ಚವು ಫಲಪ್ರದವಲ್ಲದ ವೆಚ್ಚವೆಂದು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲಾಗದೆ. ಈ ಬಗ್ಗೆ ಸೂಕ್ತ ವಿವರಣೆ ನೀಡುವವರೆಗೂ M/s. E & Y ಸಂಸ್ಥೆಗೆ ಪಾವತಿಯಾಗಿರುವ ಮೊತ್ತ ರೂ. 45,60,000.00 ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

**14. ನಿಧಿಗಳ ಮಾರ್ಗಪಲ್ಲಟ:**

ವಿಶ್ವವಿದ್ಯಾಲಯವು ನೀಡಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ನಿಧಿಗಳ ಮಾರ್ಗಪಲ್ಲಟಕ್ಕೆ ಸಂಬಂಧಿಸಿದಂತೆ ಯಾವುದೇ ಕಂಡಿಕೆ ಇರುವುದಿಲ್ಲ.

**15. ರಾಜ್ಯ ಸರ್ಕಾರದ ಅನುದಾನಗಳು:**

2023–24ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬ್ಲಾಕ್‌ಗ್ರಾಂಟ್ ಅಡಿ ಹಾಗೂ ಕಟ್ಟಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ಯಾವುದೇ ಅನುದಾನವು ಸ್ವೀಕೃತವಾಗಿರುವುದಿಲ್ಲ.

**16. ಕೇಂದ್ರ ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಅನುದಾನಗಳು:**

ಯಾವುದೇ ಅನುದಾನ ಸ್ವೀಕೃತವಾಗಿರುವುದಿಲ್ಲ.

**17. 2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಮತ್ತು ವಿಶ್ವವಿದ್ಯಾಲಯದ ಧನಸಹಾಯ ಆಯೋಗದಿಂದ ಯಾವುದೇ ಅನುದಾನಗಳು ಸ್ವೀಕೃತವಾಗಿರುವುದಿಲ್ಲ.**

**18. ಇತರೆ ಪ್ರಾಧಿಕಾರಗಳಿಂದ ಅನುದಾನಗಳು**

ವಿಶ್ವವಿದ್ಯಾಲಯವು ಸಂಶೋಧನೆ ಮತ್ತು ಪ್ರಾಜೆಕ್ಟ್‌ಗಳಿಗೆ ಸಂಬಂಧಿಸಿದಂತೆ, ಸ್ವೀಕರಿಸಿರುವ ಅನುದಾನ ಹಾಗೂ ವೆಚ್ಚದ ವಿವರಗಳು.

**18.1. Project ಗಳಿಗೆ ಸಂಬಂಧಿಸಿದ ಮೊತ್ತ ರೂ. 7,55,200.00 ಗಳ ಆಕ್ಷೇಪಣೆ.**

2023–24ನೇ ಸಾಲಿನಲ್ಲಿ, Project ಗಳಿಗೆ ಸಲ್ಲಿಸಿರುವ ಕಡತಗಳ ಪರಿಶೀಲನೆಯಲ್ಲಿ ಈ ಕೆಳಕಂಡ Project ಗಳನ್ನು ನಿರ್ವಹಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿವೆ.

1) Indus Guru Project – Rs. 8,00,000.00
2) RDPR Project – Rs. 23,16,930.00

ಕೆಳಕಂಡ ವಿವರಗಳನ್ನು ಗಮನಿಸಲಾಗಿ:–

## 1) <u>Indus Guru Project</u>

1. ಕರಾರು ಪತ್ರಗಳನ್ನು ಮಾಡಿಕೊಂಡಿರುವುದಿಲ್ಲ.
2. ಸದರಿ ಪ್ರಾಜೆಕ್ಟ್ ದಿನಾಂಕ: 28–02–2023ಕ್ಕೆ ಪೂರ್ಣಗೊಳಿಸಬೇಕಾಗಿದ್ದು, ಪೂರ್ಣಗೊಂಡಿರುವ ಬಗ್ಗೆ ಮಾಹಿತಿ / ಸಲ್ಲಿಸಿರುವ ವರದಿಗಳ ಬಗ್ಗೆ ದಾಖಲಾತಿಗಳು ಕಡತದಲ್ಲಿರುವುದಿಲ್ಲ.
3. ಪ್ರಾಜೆಕ್ಟ್‌ಗೆ ರೂ. 8,00,000.00 ಗಳಿಗೆ ಅನುಮೋದನೆ ನೀಡಿದ್ದು, 2022–23ನೇ ಸಾಲಿನಲ್ಲಿ ರೂ. 1,88,800.00 ಹಾಗೂ 2023–24ನೇ ಸಾಲಿನಲ್ಲಿ ರೂ. 7,55,200.00 ಗಳಿಗೆ GST Invoice ಸಿದ್ಧಪಡಿಸಿ, ಪಾವತಿಗಾಗಿ ಸಲ್ಲಿಸಿರುತ್ತಾರೆ. ಒಟ್ಟಾರೆ ಪ್ರಾಜೆಕ್ಟ್ ಮೊತ್ತ ರೂ. 9,44,000.00 ಗಳಾಗಿದ್ದು, ಹೆಚ್ಚುವರಿ ಮೊತ್ತಕ್ಕೆ ಅನುಮೋದನೆ ಪಡೆದಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ.
4. 2023–24ನೇ ಸಾಲಿನಲ್ಲಿ ಈ ಕೆಳಕಂಡ Invoice ಸಲ್ಲಿಸಿದ ಮೊತ್ತಗಳು ವಿಶ್ವವಿದ್ಯಾಲಯಕ್ಕೆ ಸ್ವೀಕೃತವಾಗಿದೆಯೇ ಎಂಬ ಬಗ್ಗೆ ದಾಖಲಾತಿಗಳು ಇರುವುದಿಲ್ಲ.

| Sl No | Invoice No & Date | Amount | GST 18% | Total Amount |
|---|---|---|---|---|
| 01 | 05/30.09.2023 | 2,40,000.00 | 43,200.00 | 2,83,200.00 |
| 02 | 03/06.07.2023 | 4,00,000.00 | 72,000.00 | 4,72,000.00 |
| | | | **Total** | **7,55,200.00** |

ಮೇಲ್ಕಂಡ ಅಂಶಗಳಿಗೆ ಸೂಕ್ತ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವರೆಗೂ ರೂ. 7,55,200.00 ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

2) **RDPR Project**

2023–24ನೇ ಸಾಲಿನಲ್ಲಿ RDPR ಆಯುಕ್ತಾಲಯದ ಪತ್ರ ಸಂಖ್ಯೆ: RDC-EGS1146/2021/C.No: 535967, Dt: 17.10.2022 ರಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ, ಕುಲಪತಿಗಳು ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ರವರಿಗೆ ಸೂಚಿಸಲಾಗಿದೆ.

| Sl No | Project Name | Project Cost |
|---|---|---|
| 01 | Impact of MGNREGS in presenting distress migration in marshal village, Afzalpur Taluk, Karnataka District. | Rs. 12,16,226.00 |
| 02 | Economic & Environmental Impact of MGNREGS Plantation works in Honnakiranagi, Kalaburagi Dist. | Rs. 11,00,704.00 |
| | **Total** | **Rs. 23,16,930.00** |

ಮೇಲ್ಕಂಡಂತೆ, ಅದ್ಯಯನ ನಡೆಸಲು ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ/465/ವೆಚ್ಚ–12/2021, ದಿನಾಂಕ: 09–08–2021 ರಲ್ಲಿ 4(ಜಿ) ವಿನಾಯಿತಿ ನೀಡಲಾಗಿರುತ್ತದೆ.

**ಸದರಿ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಕಡತ ಪರಿಶೀಲನೆಯಲ್ಲಿ ಗಮನಿಸಲಾದ ಅಂಶಗಳು:**

1) ಸದರಿ ಪ್ರಾಜೆಕ್ಟ್‌ಗೆ ನೀಡಲಾದ ಅವಧಿ / ಮುಕ್ತಾಯದ ದಿನಾಂಕದ ಬಗ್ಗೆ ವಿವರಗಳಿರುವುದಿಲ್ಲ.

2) Invoice ಸಂಖ್ಯೆ: 04/24.08.2023ರಲ್ಲಿ ರೂ. 4,59,492.00 ಅನ್ನು ಸಲ್ಲಿಸಿದ್ದು, (2ನೇ ಕಂತು) ಸದರಿ ಮೊತ್ತವು ವಿಶ್ವವಿದ್ಯಾಲಯಕ್ಕೆ ಸ್ವೀಕೃತವಾಗಿರುವ ಬಗ್ಗೆ ವಿವರಗಳಿಲ್ಲ ಹಾಗೂ ಮೊದಲನೇ ಕಂತಿನ ಮೊತ್ತ ಸ್ವೀಕೃತವಾದ ಬಗ್ಗೆ ಹಾಗೂ Invoice ಸಲ್ಲಿಸಿರುವ ಬಗ್ಗೆ ದಾಖಲಾತಿಗಳಿರುವುದಿಲ್ಲ.

3) ಅಧ್ಯಯನ ನಡೆಸಲು RDPR ಆಯುಕ್ತಾಲಯವು ವಿಧಿಸಿರುವ ಷರತ್ತು/ನಿಬಂಧನೆಗಳ ಬಗ್ಗೆ ವಿವರಗಳಿಲ್ಲ.

4) 2023–24ನೇ ಸಾಲಿನಲ್ಲಿ ಭರಿಸಿರುವ ವೆಚ್ಚದ ಬಗ್ಗೆ ವೋಚರ್ / ಬಿಲ್ಲುಗಳು ಲಭ್ಯವಿರುವುದಿಲ್ಲ.

5) ಅಧ್ಯಯನ ಮುಕ್ತಾಯಗೊಂಡಿದ್ದಲ್ಲಿ, RDPR ಆಯುಕ್ತಾಲಯಕ್ಕೆ ಸಲ್ಲಿಸಿರುವ ವರದಿ ಬಗ್ಗೆ ದಾಖಲಾತಿಗಳನ್ನು ಒದಗಿಸಿಲ್ಲ.

ಮೇಲ್ಕಂಡ ದಾಖಲಾತಿ / ವಿವರಗಳನ್ನು ಹಾಜರುಪಡಿಸುವವರೆಗೂ ರೂ. **4,59,492.00** ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

**19. ಪರಿಶಿಷ್ಟ ಜಾತಿ/ಪಂಗಡ ಉಪಯೋಜನೆ ಸಂಶೋಧನಾ ಕಾರ್ಯಕ್ಕಾಗಿ 2023–24ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವರ**

ಯಾವುದೇ ಅನುದಾನಗಳು ಸ್ವೀಕೃತವಾಗಿರುವುದಿಲ್ಲ.

**20. ಅಧಿಕಾರಿಗಳು ಮತ್ತು ಬೋಧಕ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನಗಳು ಮತ್ತು ಭತ್ಯೆಗಳು:–**

**20.1. ನಿವೃತ್ತ ಅಧಿಕಾರಿಗಳು ಅಥವಾ ನೌಕರರನ್ನು ನೇಮಿಸಿಕೊಂಡು ವೇತನ ಪಾವತಿಸಿರುವುದು ರೂ. 42,48,424.00 ಗಳ ಆಕ್ಷೇಪಣೆ.**

2023–24ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ನಿವೃತ್ತ ಅಧಿಕಾರಿ / ನೌಕರರನ್ನು ನೇಮಕ ಮಾಡಿಕೊಂಡು ವೇತನದ ಮೊತ್ತವಾಗಿ ಒಟ್ಟು ರೂ. **42,48,424.00 ಗಳನ್ನು** ಪಾವತಿಸಿರುವುದು, ಓಚರ್ ಪರಿಶೀಲನೆಯಲ್ಲಿ ಕಂಡುಬಂದಿದ್ದು, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 588 ಸೇನೇನಿ 2015, ದಿನಾಂಕ: 02–03–2016 ರನ್ವಯ ನಿವೃತ್ತಿ ಹೊಂದಿದ ನೌಕರರನ್ನು

ಪುನರ್ ನೇಮಕ ಮಾಡುವ ಹಾಗಿಲ್ಲ. ಆದಾಗ್ಯೂ, ಸದರಿ ನೇಮಕಾತಿಯ ಕುರಿತು ಆದೇಶ ಪ್ರತಿ ವೇತನ ನಿಗಧಿ ಮಂಜೂರಾದ ಹುದ್ದೆಗೆದುರಾಗಿ ನೇಮಕಗೊಂಡಿರುವ ಕುರಿತು ವಿವರಗಳನ್ನು ಒದಗಿಸಲು ವಿಚಾರಣಾ ಪತ್ರ ಸಂಖ್ಯೆ: 17, ದಿನಾಂಕ: 04–09–2024 ರಂದು ಕೋರಲಾಗಿದ್ದು, ವಿಶ್ವವಿದ್ಯಾಲಯವು ದಿನಾಂಕ: 06.09.2024ರಲ್ಲಿ ಸಲ್ಲಿಸಿದ ಅನುಸರಣೆಯಲ್ಲಿ ಈ ಕೆಳಕಂಡಂತೆ ಅನುಸರಣೆ ನೀಡಿರುತ್ತಾರೆ.

ವಿಶ್ವವಿದ್ಯಾಲಯಕೆ ಸರ್ಕಾರದಿಂದ ಮಂಜೂರಾದ 49 ಬೋಧಕೇತರ ಹುದ್ದೆಗಳಲ್ಲಿ ಯಾವುದೇ ಖಾಯಂ ನೌಕರರು ಕಾರ್ಯನಿರ್ವಹಿಸುತ್ತಿರುವುದಿಲ್ಲ. ವಿಶ್ವವಿದ್ಯಾಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳನ್ನು ಜರೂರಾಗಿ ನಡೆಸುವುದು ಅವಶ್ಯಕವಾಗಿರುವುದರಿಂದ ಅನುಭವವುಳ್ಳ ನಿವೃತ್ತ ನೌಕರರನ್ನು ತಾತ್ಕಾಲಿಕವಾಗಿ ಗುತ್ತಿಗೆ ಆದಾರದ ಮೇಲೆ ನೇಮಿಸಿಕೊಳ್ಳಲಾಗಿದೆ, ಇವರಿಗೆ ಸಂಭಾವನೆ ಬಿಟ್ಟು ಬೇರೆ ಯಾವುದೇ ರೀತಿಯ ಸೌಲಭ್ಯಗಳನ್ನು ನೀಡುತ್ತಿರುವುದಿಲ್ಲವೆಂದು ಹಾಗೂ ವಿಶ್ವವಿದ್ಯಾಲಯದ ಅಧಿನಿಯಮ–2018 ರ ಕಲಂ–44ರಲ್ಲಿ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಪ್ರಯೋಗಿಸಿ ನಿವೃತ್ತಿ ಹೋದಿದ ನೌಕರರನ್ನು ಪುನರ್‌ನೇಮಕ ಮಾಡಿಕೊಂಡು ವಿಶ್ವವಿದ್ಯಾಲಯದ ಆಡಳಿತ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿ, ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಅನುಸರಣೆಯನ್ನು ಪರಿಶೀಲಿಸಲಾಗಿ, ನಿವೃತ್ತ ನೌಕರರನ್ನು ಸಮಾಲೋಚಕರು ಎಂದು ನೇಮಕಾತಿಮಾಡಿಕೊಂಡಿದ್ದು, ವಿಶ್ವವಿದ್ಯಾಲಯದಲ್ಲಿ ಸಮಾಲೋಚಕರ ಹುದ್ದೆಯು ಸರ್ಕಾರದಿಂದ ಇದುವರೆಗೂ ಸೃಜನೆಯಾಗಿರುವುದಿಲ್ಲ. ಹಾಗೂ ಸದರಿ ನಿವೃತ್ತಿ ನೌಕರರನ್ನು ಮಂಜೂರಾದ ಹುದ್ದೆಯ ಎದುರಾಗಿ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಯಾವುದೇ ದಾಖಲಾತಿ ಒದಗಿಸಿರುವುದಿಲ್ಲ. ಆದ್ದರಿಂದ, ನಿವೃತ್ತ ಅಧಿಕಾರಿಗಳು ಅಥವಾ ನೌಕರರನ್ನು ನೇಮಿಸಿಕೊಂಡು ವೇತನ ಪಾವತಿಸಿರುವ ಮೊತ್ತ ರೂ. 42,48,424.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**21. ಬೋಧಕೇತರ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನಗಳು ಮತ್ತು ಭತ್ಯೆಗಳು**

**22. ಪ್ರಯಾಣ ಭತ್ಯೆ**

ಪ್ರಯಾಣ ಭತ್ಯೆಗೆ ಸಂಬಂಧಿಸಿದಂತೆ ಯಾವುದೇ ಕಂಡಿಕೆ ಇರುವುದಿಲ್ಲ.

**23. ಖರೀದಿ ಪ್ರಕ್ರಿಯೆಗಳಲ್ಲಿ ಕೆ.ಟಿ.ಪಿ.ಪಿ ನಿಯಮಗಳ ಉಲ್ಲಂಘನೆ**

**23.1. ಟೆಂಡರ್ ಕರೆಯದೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆದಿರುವುದು ರೂ. 2,04,18,530/– ಆಕ್ಷೇಪಣೆ:–**

2023–24ನೇ ಸಾಲಿನಲ್ಲಿ ಮಾನವ ಸಂಪನ್ಮೂಲಕ್ಕೆ ಸಂಬಂಧಿಸಿದ ಕಡತ ಪರಿಶೀಲಿಸಲಾಗಿ Cosmopolitan Industrial Security and Detective Services Pvt., Ltd., ಸಂಸ್ಥೆಯು ಎಲ್1 ಬಿಡ್ಡುದಾರರಾಗಿ ಆಯ್ಕೆಗೊಂಡಿರುತ್ತಾರೆ. ದಿನಾಂಕ: 08.10.2021 ರಂದು ವಿಶ್ವವಿದ್ಯಾಲಯವೂ Workorder ಅನ್ನು ಮಾಡಿಕೊಂಡು ಸದರಿ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಿರುತ್ತಾರೆ. ಟೆಂಡರ್ ದಾಖಲೆಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಲ್ಲಿ 02 ವರ್ಷಗಳ ಒಪ್ಪಂದ ಮಾಡಿಕೊಳ್ಳುವುದಾಗಿ ನಮೂದಿಸಲಾಗಿದೆ. ಆದರೆ, ಟೆಂಡರ್ ಒಪ್ಪಂದದಲ್ಲಿ ಸದರಿ ಸಂಸ್ಥೆಯವರ ಒಪ್ಪಂದದ ದಿನಾಂಕ: 01.11.2021 ರಿಂದ ಒಂದು ವರ್ಷವಾಗಿರುವುದಾಗಿ ನಮೂದಿಸಿರುತ್ತಾರೆ.

ದಿನಾಂಕ: 31.10.2022 ರಂದು ಸದರಿ ಸಂಸ್ಥೆಯವರ ಒಪ್ಪಂದವನ್ನು ದಿನಾಂಕ: 01.11.2022 ರಿಂದ ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವವರೆಗೂ ಮುಂದುವರೆಸಲಾಗಿದೆ ಎಂದು ಪತ್ರದಲ್ಲಿ ನಮೂದಿಸಲಾಗಿದೆ. ಲೆಕ್ಕಪರಿಶೋಧನೆ ಮುಕ್ತಾಯಗೊಂಡ ದಿನಾಂಕದವರೆಗೆ (06.09.2024) Cosmopolitan Industrial Pvt Ltd ಸಂಸ್ಥೆಯವರನ್ನೇ ಟೆಂಡರ್ ಕರೆಯದೆ ಸೇವೆಯನ್ನು ಮುಂದುವರೆಸಿರುವುದು ಕೆ.ಟಿ.ಪಿ.ಪಿ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ, 2023–24ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ ರೂ. **2,04,18,530/–** ಗಳನ್ನು ಮುಂದಿನ ದಿನಗಳಲ್ಲಿ ಪ್ರತ್ಯೇಕ ಕಟ್ಟಡಕ್ಕೆ/ಬ್ಲಾಕ್‌ಗೆ ಬೇಕಾಗಿರುವ ಸಿಬ್ಬಂದಿ, ನೇಮಿಸಿರುವ ಸಿಬ್ಬಂದಿ ಹಾಗೂ ಕಾರ್ಯನಿರ್ವಹಿಸುವ ಸಿಬ್ಬಂದಿಯ ವಿವರ ಸ್ಪಷ್ಟವಾಗಿ ಕಡತದಲ್ಲಿ ನಮೂದಿಸಲು ಸೂಚಿಸಿದೆ. ಈ ಎಲ್ಲಾ ಅಂಶಗಳ ಬಗ್ಗೆ

ಸ್ಪಷ್ಟೀಕರಣ ಕೋರಿ ವಿಚಾರಣಾ ಪತ್ರ ಸಂಖ್ಯೆ: 09, ದಿನಾಂಕ: 27–08–2024 ರಂದು ನೀಡಲಾಗಿದ್ದು, ಕೆ.ಟಿ.ಪಿ.ಪಿ ನಿಯಮದ ಪ್ರಕಾರ ಟೆಂಡರ್ ಕರೆಯದೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆದಿರುವ ಮೊತ್ತ ರೂ. 2,04,18,530/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

## 23.2 ಹಿಂದಿನ ಸಾಲಿನ ಏಜೆನ್ಸಿಯನ್ನೇ ಮುಂದುವರೆಸಿ ವಾಹನಗಳನ್ನು ಬಾಡಿಗೆಗೆ ಪಡೆದಿರುವ ಬಗ್ಗೆ

2023–24ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ 03 ಎ.ಸಿ ವಾಹನಗಳನ್ನು ಮೆ. ವಿನಾಯಕ ಟೂರ್ಸ್ & ಟ್ರಾವೆಲ್ಸ್ ರವರಿಂದ ಪಡೆದಿದ್ದು, ಬಿಲ್ಲುಗಳ ಪರಿಶೀಲನೆ ಪ್ರಕಾರ ಸದರಿ ಸಾಲಿನಲ್ಲಿ ಒಟ್ಟು ರೂ. 11,92,883.00 ಗಳನ್ನು ಸದರಿ ಏಜೆನ್ಸಿಗೆ ಪಾವತಿಸಲಾಗಿರುತ್ತದೆ. ಕೆ.ಟಿ.ಪಿ.ಪಿ ಕಾಯಿದೆ ತಿದ್ದುಪಡಿ ಅಧಿನಿಯಮ–1999, ನಿಯಮ–2000 ರ ಕಲಂ–4ರ ಪ್ರಕಾರ ರೂ.5.00 ಲಕ್ಷಗಳಿಗೆ ಮೀರಿದ ಖರೀದಿಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ. ಆದರೆ ವಿಶ್ವವಿದ್ಯಾಲಯವು 2022–23ನೇ ಸಾಲಿನಲ್ಲಿ ಟೆಂಡರ್ ಕರೆಯದೇ ಕೇವಲ ದರಪಟ್ಟಿ ಕರೆದು ಖರೀದಿ ಪ್ರಕ್ರಿಯೆಯನ್ನು ಕೈಗೊಂಡಿದ್ದು, 2023–24ನೇ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಆಯ್ಕೆಯಾದ ಮೆ. ವಿನಾಯಕ ಟೂರ್ಸ್ & ಟ್ರಾವೆಲ್ಸ್ ರವರನ್ನೇ ಮುಂದುವರೆಸಿ ಬಾಡಿಗೆ ವಾಹನಗಳನ್ನು ಪಡೆಯಲಾಗಿರುತ್ತದೆ.

ಮೇಲ್ಕಂಡಂತೆ ಪಡೆಯಲಾದ 03 ವಾಹನಗಳಲ್ಲಿ ಒಂದು ವಾಹನವನ್ನು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳ ಉಪಯೋಗಕ್ಕಾಗಿ ನೀಡಲಾಗಿದ್ದು, ಶ್ರೀ ಟಿ.ಎಸ್ ಪ್ರಕಾಶ್, ಹಣಕಾಸು ಅಧಿಕಾರಿಗಳು ದಿನಾಂಕ: 30.06.2023 ರಂದು ವಯೋನಿವೃತ್ತಿ ಹೊಂದಿದ್ದು, ಶ್ರೀ ವಸಂತಕುಮಾರ್ ರವರು ದಿನಾಂಕ: 10.08.2023 ರಂದು ಹಣಕಾಸು ಅಧಿಕಾರಿಗಳಾಗಿ ಕಾರ್ಯವರದಿ ಮಾಡಿಕೊಂಡಿರುತ್ತಾರೆ. ಒಟ್ಟು 40 ದಿನಗಳ ಕಾಲ ಹಣಕಾಸು ಅಧಿಕಾರಿಗಳ ಹುದ್ದೆ ಖಾಲಿಯಿದ್ದರೂ ಸಹ ಹಣಕಾಸು ಅಧಿಕಾರಿಗಳಿಗೆ ಮೀಸಲಿಟ್ಟ ಒಂದು ವಾಹನವನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ಒದಗಿಸುವಂತೆ ಕೋರಿ, ವಿಚಾರಣಾ ಪತ್ರ ಸಂಖ್ಯೆ: 08, ದಿನಾಂಕ: 27–08–2024 ರಂದು ನೀಡಲಾಗಿದ್ದು, ವಿಶ್ವವಿದ್ಯಾಲಯವು ಪುನರ್‌ಪರಿಶೀಲನಾ ಸಮಯದಲ್ಲಿ ಅನುಸರಣಾ ಉತ್ತರವನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ 03 ಹವಾ ನಿಯಂತ್ರಿತ ಕಾರುಗಳನ್ನು 01 ವರ್ಷದ ಅವಧಿಗೆ ಬಾಡಿಗೆ ಪಡೆಯಲು ದಿನಾಂಕ: 04–11–2023 ರಂದು ಟೆಂಡರ್ ಅನ್ನು ಅಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಒಬ್ಬರು ಮಾತ್ರ ಭಾಗವಹಿಸಿದ್ದರಿಂದ ಸದರಿ ಟೆಂಡರ್ ಅನ್ನು ರದ್ದು ಪಡಿಸಿ, 02ನೇ ಬಾರಿ ದಿನಾಂಕ: 27–11–2023 & 03ನೇ ಬಾರಿ 31–01–2024 ರಂದು ಟೆಂಡರ್ ಅನ್ನು ಅಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಯಾರು ಸಹ ಭಾಗವಹಿಸದೇ ಇದ್ದುದರಿಂದ ಸದರಿ ಟೆಂಡರ್ ಅನ್ನು ರದ್ದುಪಡಿಸಲಾಗಿರುತ್ತದೆ ಹಾಗೂ 04ನೇ ಬಾರಿ ಲೋಕಸಭಾ ಚುನಾವಣಾ 2024ರ ಮಾದರಿ ನೀತಿ ಸಂಹಿತಿ ಜಾರಿಯಲ್ಲಿದ್ದುದರಿಂದ, ದಿನಾಂಕ: 11–03–2024 ರಂದು ಟೆಂಡರ್ ಪ್ರಕಟಣೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಲು ಮುಖ್ಯ ಚುನಾವಣಾಧಿಕಾರಿಗಳ ಅನುಮೋದನೆಯನ್ನು ಕೋರಲಾಗಿದ್ದು, ಚುನಾವಣಾಧಿಕಾರಿಗಳು ಅನುಮೋದನೆ ನೀಡದೇ ಇರುವುದರಿಂದ ಟೆಂಡರ್ ಆಹ್ವಾನಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮುಂದುವರೆದು, ದಿನಾಂಕ: 31–05–2024 ರಂದು 04ನೇ ಬಾರಿ ಟೆಂಡರ್ ಅನ್ನು ಅಹ್ವಾನಿಸಲಾಗಿತ್ತು. ಆದರೆ, ಸದರಿ ಟೆಂಡರ್‌ನಲ್ಲಿ ಇಬ್ಬರು ಸರಬರಾಜುಗಾರರು ಭಾಗವಹಿಸಿದ್ದು, ಟೆಕ್ನಿಕಲ್–ಬಿಡ್‌ನ ಪರಿಶೀಲನೆಯಲ್ಲಿ ಅನರ್ಹಗೊಂಡಿರುವುದರಿಂದ ಸದರಿ ಟೆಂಡರ್ ಅನ್ನು ಸಹ ರದ್ದು ಪಡಿಸಲಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ 2023–24ನೇ ಸಾಲಿನಲ್ಲಿ ಹಿಂದಿನ ಏಜನ್ಸಿಯಾದ ಮೆ. ವಿನಾಯಕ ಟೂರ್ಸ್ & ಟ್ರಾವಲ್ಸ್ ರವರನ್ನೇ ಮುಂದುವರೆಸಲಾಗಿರುತ್ತದೆ ಎಂದು ತಿಳಿಸಿ, ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡಬೇಕೆಂದು ಕೋರಿರುತ್ತಾರೆ ಹಾಗೂ ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ 03 ವಾಹನಗಳನ್ನು ಉಪಯೋಗಿಸಲಾಗಿದ್ದು, ವಿಶ್ವವಿದ್ಯಾಲಯದ ಕೆಲಸಗಳಾದ UUCMS & ಘಟಿಕೋತ್ಸವದ ಅನುಮೋದನೆ ಪಡೆಯಲು, ಘಟಿಕೋತ್ಸವಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಲು, ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳ ವಿವರಗಳನ್ನು HRMS ಮಾಡುವ ಕೆಲಸಗಳಿಗಾಗಿ ಉಪಯೋಗಿಸಿರುವುದರಿಂದ ಸದರಿ ಆಕ್ಷೇಪಣೆಯನ್ನು ಸಹ ಕೈಬಿಡಬೇಕೆಂದು ಕೋರಿದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ವಿಶ್ವವಿದ್ಯಾಲಯವು ಸಲ್ಲಿಸಿರುವ ಅನುಸರಣೆಯನ್ನು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲಾಗಿದೆ. ಇನ್ನು ಮುಂದೆ ಸಿಂಗಲ್–ಬಿಡ್ ಸಂದರ್ಭದಲ್ಲಿ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 1066 ವೆಚ್ಚ–12/2016, ದಿ: 20–03–2017 ರಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸುವಂತೆ ಸೂಚಿಸುತ್ತಾ, ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್ ಮೂಲಕವೇ ಸರಕು ಮತ್ತು ಸೇವೆಗಳನ್ನು ಪಡೆಯಲು ಕ್ರಮ ವಹಿಸುವಂತೆ ತಿಳಿಸಲಾಗಿದೆ.

**24. ಪರೀಕ್ಷಾ ಕಾರ್ಯಕ್ಕಾಗಿ ಮಾಡಲಾಗಿರುವ ಪಾವತಿಗಳು:–**

**24.1 ಉತ್ತರ ಪತ್ರಿಕೆಗಳ ಖರೀದಿ ಹಾಗೂ ದಾಸ್ತಾನು ವಹಿಯ ನಿರ್ವಹಣೆ**

2023–24ನೇ ಸಾಲಿನಲ್ಲಿ ಉತ್ತರ ಪತ್ರಿಕೆಗಳ ಖರೀದಿ ಪ್ರಕ್ರಿಯೆಯನ್ನು ನಡೆಸಿರುವುದಿಲ್ಲ. 2022–23ನೇ ಸಾಲಿನಲ್ಲಿ ಖರೀದಿಸಲಾದ ಉತ್ತರ ಪತ್ರಿಕೆಗಳಲ್ಲಿ ಅಂತಿಮ ದಾಸ್ತಾನಿನಲ್ಲಿ ಬಾಕಿಯಿದ್ದು, ಉತ್ತರ ಪತ್ರಿಕೆಗಳನ್ನು 2023–24ನೇ ಸಾಲಿನಲ್ಲಿ ಬಳಕೆಮಾಡಲಾಗಿರುತ್ತದೆ. ವಿವರಗಳು ಕೆಳಕಂಡಂತಿವೆ.

| | ಉತ್ತರ ಪತ್ರಿಕೆ (24 Pages) (Main Answers Booklet) | Additional Sheet | Interim Test Paper (08 Pages) |
|---|---|---|---|
| Open Balance on 01.04.2023 Purchases | 10418 | 19630 | 2835 |
| **Total** | **10418** | **19630** | **2835** |
| Issued | 3549 | 1362 | 0 |
| Close Balance on 31-3-2024 | 6869 | 18268 | Negetive |

ಮೇಲ್ಕಂಡಂತೆ 08 ಪುಟಗಳ Interim Test Paters ಗಳ ಪ್ರಾರಂಭಿಕ ಶಿಲ್ಕು – 2835 ಇದ್ದು, 2023–24ನೇ ಸಾಲಿನಲ್ಲಿ (–) 6105 ಗಳ Interim Test Papers ಅನ್ನು ವಿತರಣೆ ಮಾಡಿರುವುದಾಗಿ ವಹಿಯಲ್ಲಿ ನಮೂದಿಸಲಾಗಿದೆ. ಅಂದರೆ, ಋಣಾತ್ಮಕ ಅಂತಿಮಶಿಲ್ಕು ನಮೂದಿಸಲಾಗಿದೆ. ಈ ಬಗ್ಗೆ ಸೂಕ್ತ ವಿತರಣೆ ನೀಡಲು ಸೂಚಿಸಿದೆ.

**24.2 ಅಂಕಪಟ್ಟಿಗಳ ವಿತರಣೆ**

2023–24ನೇ ಸಾಲಿನಲ್ಲಿ ಪದವಿ ಪ್ರಮಾಣ ಪತ್ರ / ಅಂಕಪಟ್ಟಿಗಳನ್ನು ವಿತರಿಸಿರುವುದಿಲ್ಲ. 2022–23ನೇ ಸಾಲಿನ ಅಂತ್ಯಕ್ಕೆ ಬಾಕಿಯಿದ್ದ 782 ಪ್ರಮಾಣ ಪತ್ರಗಳನ್ನು 2023–24ನೇ ಸಾಲಿನ ಅಂತ್ಯಕ್ಕೆ ವಿತರಿಸದೇ ದಾಸ್ತಾನಿನಲ್ಲಿ ಉಳಿಸಿಕೊಳ್ಳಲಾಗಿದೆ.

**24.3. Answer Booklets ಗಳನ್ನು ದಾಸ್ತಾನಿಗೆ ಪಡೆಯದಿರುವ ಮೊತ್ತ ರೂ. 1,00,890.00 ಗಳ ಆಕ್ಷೇಪಣೆ.**

2023–24ನೇ ಸಾಲಿನಲ್ಲಿ, Triangle Print Communications ರವರಿಂದ 15000 Answer Booklets ಗಳನ್ನು ಖರೀದಿಸಿ, ಚೆಕ್ಕು ಸಂಖ್ಯೆ: 325009, ದಿನಾಂಕ: 04–12–2023ರಲ್ಲಿ ರೂ. 1,00,890.00 ಗಳನ್ನು ಪಾವತಿಸಿರುತ್ತಾರೆ. ಸದರಿ ಬಿಲ್ಲನ್ನು ಪರಿಶೀಲಿಸಲಾಗಿ, ಬಿಲ್ಲಿನಲ್ಲಿ Stock Certificate ನಮೂದಿಸಿರುವುದಿಲ್ಲ ಹಾಗು 1500 Answer Booklets ಗಳನ್ನು ದಾಸ್ತಾನಿಗೆ ಪಡೆದಿರುವ ಬಗ್ಗೆ ವಹಿ/ದಾಖಲೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೂ Triangle Print Communications ರವರಿಗೆ ಪಾವತಿಸಲಾದ ಮೊತ್ತ ರೂ. 1,00,890.00 ಗಳನ್ನು ಆಕ್ಷೇಪಣೆಗೆ ಸಲ್ಲಿಸಿದೆ.

**25. ಕಾಮಗಾರಿ ವೆಚ್ಚಗಳು:**

**25.1. ಕಾಮಗಾರಿಗಳ ವಹಿಯನ್ನು ನಿರ್ವಹಿಸದಿರುವ ಬಗ್ಗೆ:**

ಇಂಜಿನಿಯರಿಂಗ್ ವಿಭಾಗದಲ್ಲಿ ವಿವಿಧ ಬಗೆಯ ಮುಖ್ಯ ಮತ್ತು ಕಿರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಈ ಕಾರಣದಿಂದ ಕಾಮಗಾರಿಗಳ ಆರ್ಥಿಕ ಪ್ರಗತಿ ಮತ್ತು ಭೌತಿಕ ಪ್ರಗತಿಯ ವಿವರಗಳು ಮತ್ತು ಕಾಮಗಾರಿಗಳಿಗೆ ಇದುವರೆಗೂ ಆಗಿರುವ ಒಟ್ಟಾರೆ ವೆಚ್ಚದ ವಿವರಗಳನ್ನು ನಿಖರವಾಗಿ ತಿಳಿಯಲು ಸಾಧ್ಯವಾಗಿರುವುದಿಲ್ಲ. **ಕರ್ನಾಟಕ ಲೋಕೋಪಯೋಗಿ ಸಂಹಿತೆ–2014 ಪ್ಯಾರಾ ಸಂಖ್ಯೆ 220 ರಂತೆ** ವಿವಿಧ ಕಾಮಗಾರಿಗೆ ಹಂಚಿಕೆ ಮಾಡಲಾದ ಅನುದಾನಕ್ಕೆ ಎದುರಾಗಿ ಲೆಕ್ಕಶೀರ್ಷಿಕೆಯ ಅನುಸಾರ ಪ್ರಸಕ್ತ ಬಿಲ್ಲಿನವರೆಗೆ ಭರಿಸಲಾಗಿರುವ ವೆಚ್ಚದ ವಿವರಗಳನ್ನು ಕಾಮಗಾರಿಯ ವಹಿಯಲ್ಲಿ

ನಮೂದಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾಲಯವು ಈ ಕ್ರಮ ಅನುಸರಿಸಿರುವುದಿಲ್ಲ. ಕಾಮಗಾರಿ ವಹಿಯನ್ನು ನಿರ್ವಹಿಸಲು ಸೂಚಿಸಿದೆ.

**25.2 ಕಾಮಗಾರಿಗಳಿಗೆ ಸಂಬಂಧಿಸಿದಂತೆ.**

2023–24ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳ ಪರಿಶೀಲನೆಯ ಪ್ರಕಾರ 2023–24ನೇ ಸಲಿನಲ್ಲಿ ವಿಶ್ವವಿದ್ಯಾಲಯವು ಕೆ.ಹೆಚ್.ಬಿ ಸಂಸ್ಥೆಗೆ ಒಟ್ಟು ರೂ. 23,99,38,300.00 ಗಳನ್ನು (IT 2% ಕಡಿತಗೊಳಿಸಿದ ನಂತರದ ಮೊತ್ತ) ಹಾಗೂ KRIDL ಸಂಸ್ಥೆಗೆ ರೂ. 86,40,000.00 ಗಳನ್ನು (IT 2% ಕಡಿತಗೊಳಿಸಿದ ನಂತರದ ಮೊತ್ತ) **ಅನುಬಂಧ–2** ಠೇವಣಿ ಮಾಡಲಾಗಿರುತ್ತದೆ. ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

- **ಕಾಮಗಾರಿಗಳ ಪರಿಶೀಲನೆಯಲ್ಲಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.**

1. KHB ಸಂಸ್ಥೆಯಿಂದ ರಾಜಾಜಿ ಹಾಲ್‌ನ Renovations ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ.

- ಡಾ. ಬಿ.ಆರ್ ಅಂಬೇಡ್ಕರ್ ವಿಶ್ವವಿದ್ಯಾಲಯದ ನೂತನ Campus ಗೆ ಬರುವ ಮಾನ್ಯ ವಿಶ್ವವಿದ್ಯಾಲಯವು ಸೆಂಟ್ರಲ್ ಕಾಲೇಜ್ ಆವರಣದಲ್ಲಿರುವ ರಾಜಾಜಿ ಹಾಲ್‌ನಲ್ಲಿ ಕಾರ್ಯನಿರ್ವಹಿಸಿದ್ದು, ಸದರಿ ಕೊಠಡಿಯ Renovations ಕಾಮಗಾರಿಗಳನ್ನು KHB ಸಂಸ್ಥೆಯ ಮೂಲಕ ನಿರ್ವಹಿಸಿದ್ದು, ಸದರಿ ಕಾಮಗಾರಿಗಳಿಗೆ ರೂ. 1,82,35,000.00 ಗಳನ್ನು ಪಾವತಿಸುವಂತೆ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ED/210/HPU/2022, dt: 01-04-2023 ರಲ್ಲಿ ಆದೇಶಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಚೆಕ್ ಸಂಖ್ಯೆ: 23918, ದಿ: 18.05.2023 ರಲ್ಲಿ ಶೇಖಡ 2 ರಷ್ಟು ಆದಾಯ ತೆರಿಗೆ ಮೊತ್ತ ರೂ. 3,64,700.00 ಗಳನ್ನು ಕಡಿತಗೊಳಿಸಿ, ರೂ. 1,78,70,300.00 ಗಳನ್ನು KHB ಸಂಸ್ಥೆಗೆ ಪಾವತಿಸಲಾಗಿರುತ್ತದೆ.
- ರೂ. 1,82,35,000.00 ಗಳಿಗೆ ಹಣ ಬಳಕೆ ಪ್ರಮಾಣ ಪತ್ರ ಪಡೆದಿರುವುದಿಲ್ಲ.
- ರಾಜಾಜಿ ಹಾಲ್‌ನಿಂದ Base Campus ಗೆ ಶಿಫ್ಟ್ ಆದ ನಂತರ ರಾಜಾಜಿ ಹಾಲ್‌ನಲ್ಲಿದ್ದ Fernitures & ಇತರೆ ಸಮಾಗ್ರಿಗಳನ್ನು ವಿಶ್ವವಿದ್ಯಾಲಯವು ತನ್ನ ಸುಪರ್ದಿಗೆ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

2. KHB ಸಂಸ್ಥೆಯಿಂದ Auditorium / Guesthouse/Quarters/Faculty Block/Library Block/Academic Block (Interior Work) and external development and providing compound wall near staff Quarters.

ಮೇಲ್ಕಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ED/126/HPU/2021, dt: 26-09-2022ರ ರೂ. 30.80 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋಧನೆ ನೀಡಲಾಗಿದೆ. ಅದರಂತೆ KHB ಸಂಸ್ಥೆಯು M/s. Shree Builders LLP ರವರಿಂದ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

ಮೇಲ್ಕಂಡ ಸರ್ಕಾರದ ಆದೇಶ ಸಂಖ್ಯೆ: ED/126/HPU/2021, dt: 26-09-2022 ರಲ್ಲಿನ ಷರತ್ತುಗಳನ್ವಯ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

| | |
|---|---|
| ಷರತ್ತು ಸಂಖ್ಯೆ: 01 ರನ್ವಯ | KTPP ನಿಯಮಗಳಂತೆ ಟೆಂಡರ್ ಕರೆದಿರುವ ಬಗ್ಗೆ ವಿವರಗಳನ್ನು ಒದಗಿಸಿಲ್ಲ. |
| ಷರತ್ತು ಸಂಖ್ಯೆ: 04 ರನ್ವಯ | ಪ್ರತಿ ತಿಂಗಳು ಭೌತಿಕ / ಆರ್ಥಿಕ ಪ್ರಗತಿ ವಿವರಗಳನ್ನು ಅನುಷ್ಠಾನ ಸಂಸ್ಥೆಯಿಂದ ಪಡೆದು ಪರಿಶೀಲಿಸಿರುವ ಬಗ್ಗೆ ದಾಖಲಾತಿ ಒದಗಿಸಿಲ್ಲ. |
| ಷರತ್ತು ಸಂಖ್ಯೆ: 06 ರನ್ವಯ | ಕಾಮಗಾರಿ ಅನುಷ್ಠಾನದ ವಿವರಗಳು / ಭೌತಿಕ / ಆರ್ಥಿಕ ಪ್ರಗತಿ ವಿವರಗಳನ್ನು ಕಡ್ಡಾಯವಾಗಿ ಪ್ರತಿ ತಿಂಗಳು ನಡೆಯುವ KDP ಸಭೆಯಲ್ಲಿ ಮಂಡಿಸಿರುವ ಬಗ್ಗೆ ವಿವರಗಳನ್ನು ಒದಗಿಸಿಲ್ಲ. |

| | |
|---|---|
| ಷರತ್ತು ಸಂಖ್ಯೆ: 07 ರನ್ವಯ | ಕಾಮಗಾರಿಯ ಅಂದಾಜು ಪಟ್ಟಿಯನ್ನು ಹಾಗೂ ಪ್ರತಿ ತಿಂಗಳ ಪ್ರಗತಿಯ ವಿವರಗಳನ್ನು ವಿಶ್ವವಿದ್ಯಾಲಯದ ಜಾಲಾತಾಣದಲ್ಲಿ ದಾಖಲಿಸಿರುವ ಬಗ್ಗೆ ವಿವರಗಳಿಲ್ಲ. ಕಾಮಗಾರಿಗೆ ಸಂಬಂಧಿಸಿದಂತೆ, Site handing over work Commencement / work completionಗೆ ಸಂಬಂದಿಸಿದ ದಾಖಲಾತಿಗಳನ್ನು ಒದಗಿಸಿರುವುದಿಲ್ಲ. |

**26. ಸಂಗ್ರಹಣಾ ವಿವರಗಳು:**

**26.1 ವಾರ್ಷಿಕ ದಾಸ್ತಾನು ಸತ್ಯಾಪನೆ ವಿವರಗಳು:–**

2023–24ನೇ ಸಾಲಿನ ಲೆಕ್ಕಪರಿಶೋಧನೆ ಚಾಲ್ತಿಯಲ್ಲಿದ್ದು, ವಿಶ್ವವಿದ್ಯಾಲಯವು ಕರ್ನಾಟಕ ಆರ್ಥಿಕ ಸಂಹಿತೆ 1958 ಪ್ರಪತ್ರ 34 ರಲ್ಲಿ ದಾಸ್ತಾನು ನಿರ್ವಹಿಸಬೇಕಾಗಿರುತ್ತದೆ ಹಾಗೂ ನಿಯಮ 169 ರೀತ್ಯಾ ವರ್ಷವಾರು ದಾಸ್ತಾನು ವಸ್ತುಗಳ ಸತ್ಯಾಪನೆಯನ್ನು ಬೇರೊಬ್ಬ ಅಧಿಕಾರಿಯವರಿಂದ ದೃಢೀಕರಿಸಲು ಸೂಚಿಸಿದೆ. ಅದರಂತೆ, ವಿಶ್ವವಿದ್ಯಾಲಯದಲ್ಲಿ ಕ್ರಮ ಕೈಗೊಂಡಿಲ್ಲದಿರುವುದು ಕಂಡುಬಂದಿದ್ದು, ಈ ವಾರ್ಷಿಕ ಭೌತಿಕ ದಾಸ್ತಾನು ಪರಿಶೀಲನಾ ವರದಿ ಹಾಗೂ ವಹಿಗಳನ್ನು (ಸ್ವೀಕೃತಿ ಹಾಗೂ ಲೆಕ್ಕಪರಿಶೋಧನೆಗೆ ಒದಗಿಸುವಂತೆ ಲೆಕ್ಕಪತ್ರ ವಿಚಾರಣಾ ಪತ್ರ ಸಂಖ್ಯೆ: 6, ದಿ: 26.082024 ರಂದು ಕೋರಲಾಗಿದ್ದು, ಯಾವುದೇ ಅನುಸರಣೆ ನೀಡಿರುವುದಿಲ್ಲ.

**26.2 ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಿವರಗಳು**

ಡಾ. ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯವು ಸೆಪ್ಟಂಬರ್–2017ರ ಮಾಹೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಿದ್ದು, 2023–24ನೇ ಸಾಲಿನಲ್ಲಿ ಪುಸ್ತಕಗಳ ದಾಸ್ತಾನಿನ ವಿವರಗಳು ಈ ಕೆಳಕಂಡಂತಿದೆ:–

| **ವಿವರ** | **ಪುಸ್ತಕದ ಸಂಖ್ಯೆ** |
|---|---|
| 01.04.2023 ಕ್ಕೆ ಪ್ರಾರಂಭಿಕ ಶಿಲ್ಕು | 2668 |
| 2023–24ನೇ ಸಾಲಿನ ಸ್ವೀಕೃತಿಗಳು ಖರೀದಿ–0<br>ದೇಣಿಗೆ ನೀಡಿರುವ ಪುಸ್ತಕಗಳು–64 | 64 |
| **ಒಟ್ಟು** | **2732** |

ಸದರಿ ಸಾಲಿನಲ್ಲಿ 64 ಪುಸ್ತಕಗಳನ್ನು ದೇಣಿಗೆಯಾಗಿ ಸ್ವೀಕರಿಸಲಾಗಿದೆ. ಸದರಿ ಸಾಲಿನಲ್ಲಿ ಯಾವುದೇ ಪುಸ್ತಕಗಳು ಹಾಳಾಗಿರುವುದಿಲ್ಲವೆಂದು ಗ್ರಂಥಪಾಲಕರು ತಿಳಿಸಿರುತ್ತಾರೆ.

**27. ವಿಶ್ವವಿದ್ಯಾಲಯದ ಮುದ್ರಣಾಲಯ:**

ವಿಶ್ವವಿದ್ಯಾಲಯವು ನೀಡಿರುವ ಮಾಹಿತಿಗಳನ್ವಯ, ವಿಶ್ವವಿದ್ಯಾಲಯದಲ್ಲಿ ಯಾವುದೇ ಮುದ್ರಣಾಲಯವು ಇರುವುದಿಲ್ಲ.

**28. ವಾಹನಗಳ ಖರೀದಿಗೆ ಮುಂಗಡಗಳು:**

2023–24ನೇ ಸಾಲಿನಲ್ಲಿ ವಾಹನಗಳ ಖರೀದಿಗೆ ಸಂಬಂಧಿಸಿದಂತೆ ಯಾವುದೇ ಕಂಡಿಕೆ ಇರುವುದಿಲ್ಲ.

**29. ಗೃಹ ನಿರ್ಮಾಣ/ಖರೀದಿಗೆ ಮುಂಗಡಗಳು:**

ವಿಶ್ವವಿದ್ಯಾಲಯವು ನೀಡಿರುವ ಮಾಹಿತಿಗಳನ್ವಯ, ವಿಶ್ವವಿದ್ಯಾಲಯಕ್ಕೆ 2023–24ನೇ ಸಾಲಿನಲ್ಲಿ ಗೃಹ ನಿರ್ಮಾಣ/ಖರೀದಿಗೆ ಸಂಬಂಧಿಸಿದ ಮುಂಗಡಗಳು ನೀಡಿರುವುದಿಲ್ಲ.

**30. ಸಹಾಯ ಅನುದಾನ**

ವಿಶ್ವವಿದ್ಯಾಲಯವು ನೀಡಿರುವ ಮಾಹಿತಿಗಳನ್ವಯ, ವಿಶ್ವವಿದ್ಯಾಲಯಕ್ಕೆ 2023-24ನೇ ಸಾಲಿನಲ್ಲಿ ಯಾವುದೇ ರೀತಿಯ ಸಹಾಯಾನುದಾನಗಳು ಬಿಡುಗಡೆಯಾಗಿರುವುದಿಲ್ಲ

**31. ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳ ದತ್ತಿಗಳು**

2023-24ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಯಾವುದೇ ದತ್ತಿನಿಧಿಯನ್ನು ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

**32. ಭವಿಷ್ಯ ನಿಧಿ**

2023-24ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ಯಾವುದೇ ಕಂಡಿಕೆ ಇರುವುದಿಲ್ಲ.

**33. ನಿವೃತ್ತ ವೇತನ ಫಲಾನುಭವ ಯೋಜನೆಗಳು:-**

2023-24ನೇ ಸಾಲಿನಲ್ಲಿ ಪಿಂಚಣಿ ಸೌಲಭ್ಯ ಯೋಜನೆಯಡಿ ವಿಶ್ವವಿದ್ಯಾಲಯದಲ್ಲಿ ಖಾಯಂ ನೌಕರರು ಇರುವುದಿಲ್ಲ.

**34. ಪುಸ್ತಕಗಳ ಮಾರಾಟ:-**

2023-24ನೇ ಸಾಲಿನಲ್ಲಿ ಪುಸ್ತಕಗಳ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕಂಡಿಕೆ ಇರುವುದಿಲ್ಲ.

**35. ಎಂ.ಎಸ್.ಐ.ಎಲ್ ಸಂಸ್ಥೆಯ ಸಿ.ಎಸ್.ಆರ್ ನಿಧಿಯಿಂದ ಸೋಲಾರ್ ಟ್ರೀ ನಿರ್ಮಿಸಲು ಹಣ ಮಂಜೂರು ಮಾಡಿರುವ ಬಗ್ಗೆ.**

2023-24ನೇ ಸಾಲಿನ ಲೆಕ್ಕಪರಿಶೋಧನೆ ಚಾಲ್ತಿಯಲ್ಲಿದ್ದು, ದಿನಾಂಕ: 29-02-2024 ರಂದು M/s. Mysore Sales International Ltd. ಇವರಿಂದ ರೂ. 7,90,135.00 ಗಳು ವಿಶ್ವವಿದ್ಯಾಲಯ ನಿಧಿಗೆ ಜಮೆ ಆಗಿರುವುದು ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ಕಂಡುಬಂದಿದ್ದು, ಸದರಿ ಸ್ವೀಕೃತಿಗೆ ಸಂಬಂಧಿಸಿದಂತೆ ದಿನಾಂಕ:20.09.2024ರಂದು ನಡೆದ ಪುನರ್‌ಪರಿಶೀಲನೆ ಸಮಯದಲ್ಲಿ ಹಾಜರುಪಡಿಸಲಾದ ಕಡತವನ್ನು ಪರಿಶೀಲಿಸಲಾಗಿ, ವಿಶ್ವವಿದ್ಯಾಲಯದ ಆವರಣದಲ್ಲಿ 5 ಕೆವ್ಯಾಟ್ ಸಾಮರ್ಥ್ಯದ ಸೋಲಾರ್ ಟ್ರೀ ನಿರ್ಮಿಸಲು ಎಂ.ಎಸ್.ಐ.ಎಲ್ ಸಂಸ್ಥೆಯವರು ಸಿ.ಎಸ್.ಆರ್ ನಿಧಿಯಿಂದ ರೂ. 7,90,135/- ಗಳನ್ನು ವಿಶ್ವವಿದ್ಯಾಲಯದ ಕೆನರಾ ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ. ಸದರಿ ಮೊತ್ತ ಸ್ವೀಕೃತವಾದ ನಂತರ ವಿಶ್ವವಿದ್ಯಾಲಯದಲ್ಲಿ 5 ಕೆವ್ಯಾಟ್ ಸಾಮರ್ಥ್ಯದ ಸೋಲಾರ್ ಟ್ರೀ ನಿರ್ಮಾಣ ಯೋಜನೆಯನ್ನು ಇದುವರೆವಿಗೂ ಪ್ರಾರಂಭಿಸಿರುವುದಿಲ್ಲ. ಆದ್ದರಿಂದ ಎಂ.ಎಸ್.ಐ.ಎಲ್ ಸಂಸ್ಥೆಯ ವತಿಯಿಂದ ಬಿಡುಗಡೆ ಮಾಡಲಾದ ಅನುದಾನವನ್ನು ಸದುಪಯೋಗಪಡಿಸಿಕೊಂಡು ಸೋಲಾರ್ ಟ್ರೀ ಯೋಜನೆಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವಂತೆ ತಿಳಿಸಲಾಗಿದೆ.

**36.1 ವಿಶ್ವವಿದ್ಯಾಲಯದ ಜಾಗಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಕರಾರು ಪತ್ರವನ್ನು ಮಾಡಿಕೊಳ್ಳದಿರುವ ಬಗ್ಗೆ.**

ಬೆಂಗಳೂರು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯ ಅನ್ನು ಸ್ಥಾಪಿಸಲು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸರ್ವೆ ನಂ.6 ಮತ್ತು 65 ರಲ್ಲಿನ ಭಾಗಶಃ ಜಾಗ ಹಾಗೂ ಸರ್ವೆ ನಂ.81, 82 ಮತ್ತು 83 ರಲ್ಲಿನ ಸಂಪೂರ್ಣ ಜಾಗ ಸೇರಿದಂತೆ ಒಟ್ಟಾರೆ 43.35 ಎಕರೆ ಜಮೀನನ್ನು ಪ್ರತಿ ಎಕರೆಗೆ ರೂ. 1000/- ದಂತೆ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಯುಬಿವಿ 2016 (ಭಾಗ-3), ದಿ:04.01.2017ರಲ್ಲಿ ಸರ್ಕಾರವು ಅನುಮೋಧನೆಯನ್ನು ನೀಡಲಾಗಿರುತ್ತದೆ. ಅದರಂತೆ, ಬೆಂಗಳೂರು ವಿಶ್ವವಿದ್ಯಾಲಯವು ದಿನಾಂಕ: 20.02.2018 ರಂದು ಸದರಿ ಜಾಗವನ್ನು ಬೆಂಗಳೂರು ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಗೆ ಹಸ್ತಾಂತರ ಮಾಡಿರುತ್ತಾರೆ.

ಬೆಂಗಳೂರು ವಿಶ್ವವಿದ್ಯಾಲದಿಂದ ಗುತ್ತಿಗೆ ಆಧಾರದ ಮೇಲೆ ಪಡೆದ ಜಾಗಕ್ಕೆ ಸಂಬಂದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯದ ನಡುವೆ ಗುತ್ತಿಗೆ ಕರಾರನ್ನು ಮಾಡಿಕೊಂಡಿರುವುದಿಲ್ಲ.

**36.2. ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ ನಂತರ ಕಾಯಿದೆಯನ್ವಯ ಕಾರ್ಯ ನಿರ್ವಹಿಸದಿರುವ ಬಗ್ಗೆ.**

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯ ಪತ್ರದ **ವಿಶೇಷ ರಾಜ್ಯ ಪತ್ರಿಕೆ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 03 ಶಾಸನ 2018**, ಬೆಂಗಳೂರು ದಿ:16.10.2019 ರಂತೆ "ಬೆಂಗಳೂರು ಡಾ. ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯಅಧಿನಿಯಮ 2018" ಅನ್ನು ಪ್ರಕಟಿಸಲಾಗಿದ್ದು, **ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 41 ಯುಬಿವಿ 2018 (ಭಾಗ-2), ದಿ:30.10.2019** ರಂತೆ, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ದಿನಾಂಕ: 30.10.2019 ರಿಂದ ಜಾರಿಗೆ ಬರತಕ್ಕದ್ದೆಂದು ಆದೇಶಿಸಲಾಗಿದೆ. ಅದರಂತೆ ಸದರಿ ಅಧಿನಿಯಮದ ಕಲಂ-03 ರಂತೆ ಬೆಂಗಳೂರು ಡಾ! ಬಿ ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯಎಂದು ಕರೆಯಲಾಗುವ ಏಕಾತ್ಮಕ, ಸಂಯೋಜನೆಯನ್ನು ನೀಡದಿರುವ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದ್ದು, ವಿಶ್ವವಿದ್ಯಾಲಯದಲ್ಲಿ ಅವಶ್ಯಕವಾದ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ ವಿವಿಧ ಹಂತದಲ್ಲಿದ್ದು ಅವುಗಳನ್ನು ಸಂಬಂಧಿಸಿದ ಅಧಿಕಾರಿ/ಕುಲಾಧಿಪತಿ/ಘನ ಕರ್ನಾಟಕ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಅನುಮೋದನೆಯಾದ ನಂತರ ಅವುಗಳ ಪ್ರತಿಯನ್ನು ಹಾಜರುಪಡಿಸಲಾಗುವುದೆಂದು ತಿಳಿಸಿರುತ್ತಾರೆ. ಪರಿನಿಯಮಗಳಿಗೆ ಸಂಬಂಧಿಸಿದಂತೆ ವಿವಿಧ ಪರಿನಿಯಮಗಳ ರಚನೆಯು ವಿವಿಧ ಹಂತದಲ್ಲಿದ್ದು, ಅವುಗಳನ್ನು ಕಾಯ್ದೆಯಲ್ಲಿರುವ ಅಂಶಗಳ ಪಾಲನೆಯಾಗಬೇಕಾಗಿದ್ದು, ಸದರಿ ಹಂತಗಳ ಪಾಲನೆಯಾದ ನಂತರ ಅನುಮೋದನೆಗೆ ಕಳುಹಿಸಲಾಗುವುದು. ಅದು ಅನುಮೋದನೆಯಾದ ನಂತರ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗುವುದೆಂದು ತಿಳಿಸಿರುತ್ತಾರೆ. ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಿಗೆ ನಿಗಧಿಪಡಿಸಿರುವ ಸಾಮಾನ್ಯ ಮತ್ತು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ರಚನೆಯು ಈಗಾಗಲೇ ರಚನೆಯಾಗಿದ್ದು, ಮಾನ್ಯ ರಾಜ್ಯಪಾಲರಿಗೆ ವಿಶೇಷ ಕಾರ್ಯದರ್ಶಿರವರಿಂದ (ಪ್ರಭಾರ) ಪತ್ರ ಸಂಖ್ಯೆ ಜಿಎಸ್ 01 ಇಯುಎಮ್ 2021 ದಿನಾಂಕ: 06-02-2021 ಇವರಿಂದ ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳನ್ವಯ ಎಲ್ಲಾ ರೀತಿಯ ಅಧಿಕಾರ ಚಲಾಯಿಸಲು ಮಾನ್ಯ ಕುಲಪತಿಗಳಿಗೆ ಅನುಮೋದನೆ ನೀಡಿರುತ್ತಾರೆ.

ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದು ಮೂರು ವರ್ಷ ಕಳೆದರೂ ಸಹ, (ಲೆಕ್ಕಪರಿಶೋಧನಾ ಅವಧಿಗೆ) ಅವಶ್ಯಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು, ವಿಶ್ವವಿದ್ಯಾಲಯವು ತುರ್ತು ಕ್ರಮ ವಹಿಸದೇ ನಿಧಾನಗತಿಯನ್ನು ಅನುಸರಿಸುತ್ತಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಗಿ ಆಕ್ಷೇಪಿಸಿದೆ. ಈ ಬಗ್ಗೆ ಹಿಂದಿನ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಿದ್ದರೂ ಸಹ, ಎಲ್ಲಾ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿರುವುದು ಆಕ್ಷೇಪಣೀಯವಾಗಿರುತ್ತದೆ.

ಆದ್ದರಿಂದ, ಈ ಬಗ್ಗೆ ಕೂಡಲೇ ಕ್ರಮ ವಹಿಸಿ, ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ತಿಳಿಸಿರುವಂತೆ ಸಮಿತಿಗಳನ್ನು ರಚಿಸಿಕೊಳ್ಳಲು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಪರಿನಿಯಮಗಳನ್ನು ರಚಿಸಿಕೊಂಡು ಕಾರ್ಯನಿರ್ವಹಿಸಲು ಸೂಚಿಸಿದೆ.

**36. ಲೆಕ್ಕಪರಿಶೋಧನಾ ಶುಲ್ಕ:-**

2023-24ನೇ ಸಾಲಿನ ಲೆಕ್ಕಪರಿಶೋಧನಾ ಶುಲ್ಕದ ಮೊತ್ತ ರೂ. 2,41,052.00 ಗಳನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ (0070-60-110-0-01-000) Audit Fees ಗೆ ಪಾವತಿಸುವಂತೆ ಸೂಚಿಸಲಾಗಿದೆ.

**37. ಸಾಮಾನ್ಯ ಅಭಿಪ್ರಾಯ:-**

1. ಬೆಂಗಳೂರು ಡಾ॥ ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ, ವಿಶ್ವವಿದ್ಯಾಲಯದ ಅಧಿನಿಯಮ 2018ರನ್ವಯ ವಿಶ್ವವಿದ್ಯಾಲಯವು ದಿನಾಂಕ: 30.10.2019 ರಿಂದ ಅಸ್ತಿತ್ವಕ್ಕೆ ಬಂದಿದ್ದು, ಕಡ್ಡಾಯವಾಗಿ ಅಧಿನಿಯಮದನ್ವಯ ಕಾರ್ಯನಿರ್ವಹಿಸುವುದು.
2. ವಿಶ್ವವಿದ್ಯಾಲಯವು ಸರ್ಕಾರದಿಂದ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಲುವಾಗಿ ಸೂಕ್ತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಂಡು ಸರ್ಕಾರದ ಅನುಮೋದನೆಯನ್ನು ಪಡೆದು ಹುದ್ದೆಗಳ ಭರ್ತಿಗೆ ಕ್ರಮವಹಿಸುವುದು.

3. ಲೆಕ್ಕಪತ್ರಗಳ ಹಾಗೂ ಖರ್ಚು-ವೆಚ್ಚಗಳ ನಿರ್ವಹಣೆಯಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 15 ರಲ್ಲಿ ತಿಳಿಸಿರುವಂತೆ, ಆರ್ಥಿಕ ಔಚಿತ್ಯ ಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಸರ್ಕಾರದ ಆದೇಶ ಸಂಖ್ಯೆ: ಆಇ 05 ಟಿಎಆರ್ 2017 ದಿನಾಂಕ:30.01.2017 ರಲ್ಲಿ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲಾ ಪ್ರಾಧಿಕಾರಗಳು ಬ್ಯಾಂಕ್ ಖಾತೆಗಳನ್ನು ತೆರೆಯಲು ಮತ್ತು ನಿರ್ವಹಿಸಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು ಅದರಂತೆ ಕ್ರಮವಹಿಸ ಬೇಕಾಗಿರುತ್ತದೆ ಹಾಗೂ ಪ್ರತಿ ವರ್ಷ ಜುಲೈ ಮಾಹೆಯಲ್ಲಿ ಸದರಿ ಸಾಲಿನಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ಅಧಿಸೂಚನೆಯ ಮೂಲಕ ಸರ್ಕಾರಕ್ಕೆ ಹಾಗೂ ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆಗೆ ಅಗತ್ಯವಾದ ಮಾಹಿತಿಯನ್ನು ಒದಗಿಸಲು ಆದೇಶಿಸಿಲಾಗಿದ್ದು, ಅದರಂತೆ ಕ್ರಮ ವಹಿಸುವುದು.
5. ವಿಶ್ವವಿದ್ಯಾಲಯವು ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಪ್ರಾಜೆಕ್ಟ್ ಮಾರ್ಗಸೂಚಿ ದಿನಾಂಕ: 11.10.2021 ರ ಕ್ರ.ಸಂ. (VI) ರನ್ವಯ, ಲೆಕ್ಕಪತ್ರಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.
6. ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ವಿತ್ತೀಯ ಹೊಣೆಗಾರಿಕೆಗಳ ಅಧಿನಿಯಮ-2003ರ ಕಲಂ-4, 5, 6 ಮತ್ತು 7ರಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕಪತ್ರಗಳ ನಿರ್ವಹಣೆ ಮತ್ತು ವಿತ್ತೀಯ ನಿರ್ವಹಣೆಯನ್ನು (Financial Management) ಪರಿಣಾಮಕಾರಿಯಾಗಿ ನಿರ್ವಹಿಸಲು ಕ್ರಮಕೈಗೊಳ್ಳುವುದು ಅವಶ್ಯಕವಾಗಿದೆ.
7. ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 327 ರಿಂದ 331 ರಅನ್ವಯ ನಗದು ಪುಸ್ತಕವನ್ನು ನಿರ್ವಹಿಸುವುದು ಹಾಗೂ ಪ್ರತಿ ತಿಂಗಳ ಕೊನೆಯ ದಿನಾಂಕದಂದು ನಗದು ಪುಸ್ತಕವನ್ನು ಮುಕ್ತಾಯ ಮಾಡಿ, ಘೋಷ್ವಾರೆಯನ್ನು ನಮೂದಿಸಿ ಬಟವಾಡೆ ಅಧಿಕಾರಿಯು ದೃಢೀಕರಿಸುವುದು ಹಾಗೂ ನಗದು ಪುಸ್ತಕದ ಅಂಕಿ-ಅಂಶಗಳನ್ನು ಬ್ಯಾಂಕ್ ಖಾತೆಯೊಂದಿಗೆ ಕಡ್ಡಾಯವಾಗಿ ಲೆಕ್ಕ ಸಮನ್ವಯ ಮಾಡಿಕೊಳ್ಳುವುದು.
8. ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಸೂಕ್ತ ಅನುಪಾಲನಾ ವರದಿಯನ್ನು ಸಲ್ಲಿಸುವುದು ಹಾಗೂ ಈ ಬಗ್ಗೆ ಆಗಿರುವ ಪ್ರಗತಿಯನ್ನು ಲೆಕ್ಕಪರಿಶೋಧನಾ ತೀರುವಳಿ ವಹಿಯನ್ನು ನಿರ್ವಹಿಸಿ ದಾಖಲಿಸುವುದು.
9. ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನಕ್ಕೆ ಸಂಬಂಧಿಸಿದಂತೆ, ಅನುದಾನ ವಹಿಯನ್ನು ನಿರ್ವಹಿಸುವುದು ಮತ್ತು ಉದ್ದೇಶಿತ ಕಾರ್ಯಕ್ರಮಗಳಿಗಾಗಿ ಸಕಾಲದಲ್ಲಿ ವೆಚ್ಚ ಭರಿಸುವುದು.
10. ವಿಶ್ವವಿದ್ಯಾಲಯವು ಹೂಡಿಕೆಗಳನ್ನು ಮಾಡುವಾಗ ಚಾಲ್ತಿಯಲ್ಲಿರುವ **ಸರ್ಕಾರದ ಆದೇಶ ಸಂಖ್ಯೆ: ಆಇ 08 ಟಿ.ಎ.ಆರ್ 2020, ದಿ:12.03.2020** ಹಾಗೂ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯುವ ಮೂಲಕವೇ ದರಗಳನ್ನು ಪಡೆದು, ಹೆಚ್ಚು ಬಡ್ಡಿದರವನ್ನು ನೀಡುವ ಅರ್ಹ ಬ್ಯಾಂಕುಗಳಲ್ಲಿ ಹೂಡಿಕೆಗಳನ್ನು ಮಾಡುವುದು.
11. ವಿಶ್ವವಿದ್ಯಾಲಯವು ಸಿಬ್ಬಂದಿ ಶಾಖೆಗೆ ಸಂಬಂಧಿಸಿದಂತೆ, ಕಡ್ಡಾಯವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮಗಳನ್ನು ಪಾಲಿಸುವುದು.
12. ವಿಶ್ವವಿದ್ಯಾಲಯವು ಸರಕು ಮತ್ತು ಸೇವೆಗಳ ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999 ಹಾಗೂ ನಿಯಮ-2000 ದಲ್ಲಿನ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.
13. ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಾಗ, ಮಂಜೂರಾದ ಹುದ್ದೆಗಳಿಗೆದುರಾಗಿ ನೇಮಿಸಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
14. ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಬಿಲ್ಲುಗಳನ್ನು ಏಜೆನ್ಸಿಗಳಿಗೆ ಪಾವತಿಸುವ ಮುನ್ನ, ಸದರಿ ಏಜೆನ್ಸಿಯು ಹಿಂದಿನ ಮಾಹೆಗಳ ಪಿ.ಎಫ್. & ಇಎಸ್‌ಐ ಚಲನ್‌ಗಳನ್ನು ಕಡ್ಡಾಯವಾಗಿ ಪಡೆದು ಪರಿಶೀಲಿಸಿ, ಸದರಿ ಮೊತ್ತಗಳು ಸಂಬಂಧಿಸಿದ ಸಿಬ್ಬಂದಿಗಳ ಖಾತೆಗಳಿಗೆ ಜಮೆಯಾಗಿರುವ ಬಗ್ಗೆ ದೃಢೀಕರಿಸಿಕೊಂಡು ತದನಂತರವೇ ಪಾವತಿಗೆ ಕ್ರಮ ಕೈಗೊಳ್ಳತಕ್ಕದ್ದು.
15. ಅಂಕಪಟ್ಟಿ, ಪ್ರಮಾಣ ಪತ್ರಗಳು, ಪ್ರಶ್ನೆಪತ್ರಿಕೆಗಳು ಹಾಗೂ ಉತ್ತರಪತ್ರಿಕೆಗಳು ವಿಶ್ವವಿದ್ಯಾಲಯದ ಪ್ರಮುಖ ದಾಖಲೆಗಳಾಗಿದ್ದು, ಇವುಗಳ ದಾಸ್ತಾನು ಹಾಗೂ ವಿತರಣಾ ವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

16. ಅಂಕಪಟ್ಟಿಗಳಿಗೆ ಮುದ್ರಣ ಮಾಡಿಸುವಾಗಲೇ, ಯಾಂತ್ರೀಕೃತ ಸಂಖ್ಯೆಗಳನ್ನೊಳಗೊಂಡ ಅಂಕಪಟ್ಟಿಗಳನ್ನು ಮುದ್ರಿಸಿ, ದಾಸ್ತಾನಿಗೆ ಪಡೆದು ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮ ವಹಿಸುವುದು.

17. ವಿಶ್ವವಿದ್ಯಾಲಯವು ಕಾಮಗಾರಿಗಳನ್ನು ಕೈಗೊಳ್ಳುವಾಗ, ಲೋಕೋಪಯೋಗಿ ಇಲಾಖಾ 'ಎ' & 'ಡಿ' ಸಂಹಿತೆಗಳನ್ನು ಗಮನದಲ್ಲಿಟ್ಟುಕೊಂಡು ನಿರ್ವಹಿಸುವುದು.

    **ಸರ್ಕಾರದ ಆದೇಶ ಸಂಖ್ಯೆ: ಆಇ 6 ಟಿ.ಎಫ್.ಪಿ 2018, ದಿ:22.03.2019**ರಲ್ಲಿ ಮಂಜೂರಾದ ಹುದ್ದೆಗಳಿಲ್ಲದೇ ಹೊರಗುತ್ತಿಗೆ ಮೇಲೆ ನೇಮಿಸಿಕೊಂಡ ಎಲ್ಲಾ ನೇಮಕಾತಿಗಳನ್ನು ರದ್ದುಪಡಿಸುವುದು ಹಾಗೂ ಹೊರಗುತ್ತಿಗೆ ಮೇಲೆ ನೇಮಕಾತಿ ಮಾಡಿಕೊಳ್ಳುವ ಮುನ್ನ ಆರ್ಥಿಕ ಇಲಾಖೆಯ ಪೂರ್ವ ಮಂಜೂರಾತಿಯನ್ನು ಪಡೆಯುವಂತೆ ಸೂಚಿಸಲಾಗಿರುತ್ತದೆ. ಅದರಂತೆ, ವಿಶ್ವವಿದ್ಯಾಲಯವು ಸದರಿ ಸರ್ಕಾರದ ಆದೇಶವನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ. ಮುಂದುವರೆದು, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾನ್ಯ ರಾಜ್ಯಪಾಲರವರಿಂದ ಅನುಮೋದನೆ ಪಡೆದು, ನೇಮಕಾತಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

18. ವಿಶ್ವವಿದ್ಯಾಲಯವು ವೆಚ್ಚ ಮಾಡಿರುವ ಮೊತ್ತಗಳಿಗೆ ಸಂಬಂಧಿಸಿದಂತೆ ಸೂಕ್ತ ಕಡತಗಳು ಮತ್ತು ವೋಚರ್‌ಗಳನ್ನು ನಿರ್ವಹಿಸುವುದು. ಸಾದಿಲ್ವಾರು ವೆಚ್ಚಗಳ ಕೈಪಿಡಿಯಲ್ಲಿ ತಿಳಿಸಿರುವ ಅಂಶಗಳನ್ವಯ ವೋಚರ್‌ಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

19. ವಿಶ್ವವಿದ್ಯಾಲಯವು ಅವಶ್ಯಕವಾಗಿ ನಿರ್ವಹಿಸಬೇಕಾದ ವಹಿಗಳನ್ನು ನಿರ್ವಹಿಸುವುದು.

20. ಪೀಠೋಪಕರಣಗಳ/ಗ್ರಂಥಾಲಯ ಪುಸ್ತಕಗಳ ಹಾಗೂ ಇತರೆ ಸಾಮಗ್ರಿಗಳ ವಾರ್ಷಿಕ ಭೌತಿಕ ದಾಸ್ತಾನು ಸತ್ಯಾಪನೆ ನಡೆಸುವುದು.

21. ವಾಹನಗಳಿಗೆ ಸಂಬಂಧಿಸಿದಂತೆ ಲಾಗ್‌ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಪ್ರತಿ ಮಾಹೆಯ ಅಂತ್ಯಕ್ಕೆ ಘೋಷ್ವಾರೆ ನಮೂದಿಸಿ, ವಾಹನ ಉಪಯೋಗಿಸುವ ಅಧಿಕಾರಿಯಿಂದ ದೃಢೀಕರಿಸುವುದು.

22. ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ/ಸಂಚಿತ ವೇತನ/ಸಮಾಲೋಚಕರಾಗಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರ ಹಾಜರಾತಿ ವಹಿ ಹಾಗೂ ಬಯೋಮೆಟ್ರಿಕ್ ಹಾಜರಾತಿ ಎರಡನ್ನೂ ಕಡ್ಡಾಯವಾಗಿ ನಿರ್ವಹಿಸುವುದು. ರಜಾ ಲೆಕ್ಕಗಳನ್ನು ಸಮರ್ಪಕವಾಗಿ ನಿರ್ವಹಿಸುವುದು.

23. ಲೆಕ್ಕಪರಿಶೋಧನೆ ದಾಖಲಾತಿಗಳನ್ನು ಸಲ್ಲಿಸದಿರುವುದು/ಅಪೂರ್ಣ ದಾಖಲೆಗಳನ್ನು ಸಲ್ಲಿಸುವುದರಿಂದ ಲೆಕ್ಕಪರಿಶೋಧನೆಯಲ್ಲಿ ಉಂಟಾಗುವ ಅಡಚಣೆಯನ್ನು ಗಮನಿಸಿ, ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಪರಿಣಾಮಕಾರಿ ಆಡಳಿತಾತ್ಮಕ ಕ್ರಮ ಕೈಗೊಳ್ಳತಕ್ಕದ್ದು.

24. ಲೆಕ್ಕಪತ್ರಗಳ ನಿರ್ವಹಣೆಯಲ್ಲಿ & ಹಣಕಾಸು ವಹಿವಾಟುಗಳಲ್ಲಿ ವರದಿ ಮಾಡಲಾದ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಹಣಕಾಸು ನಿರ್ವಹಣೆಯಲ್ಲಿ ಶಿಸ್ತು ರೂಢಿಸಿಕೊಳ್ಳುವುದು ಹಾಗೂ ಈ ನ್ಯೂನತೆಗಳಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸೂಕ್ತ ಆಡಳಿತಾತ್ಮಕ ಶಿಸ್ತು ಕ್ರಮ ಕೈಗೊಳ್ಳುವುದು.

ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಂಡು ವಿಶ್ವವಿದ್ಯಾಲಯದ ಸ್ಥಾಪನೆಯ ಸದುದ್ದೇಶವನ್ನು ಕಾರ್ಯಗತಗೊಳಿಸುವ ಸಲುವಾಗಿ ಹಾಗೂ ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿದೆ.

ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

| | |
|---|---|
| DR. B. R. AMBEDKAR SCHOOL OF ECONOMICS UNIVERSITY | |
| 2023-24 Fixed Deposits/Flexi Deposits | |
| Opening Balance | 48,31,87,309.00 |
| Investment During the Year 2023-24 | 27,18,91,702.25 |
| Interest | 13,22,12,532.72 |
| **Total** | **88,72,91,543.97** |
| Withdrawal | 66,47,15,616.70 |
| Tax Deduction | - |
| **Closing Balance** | **22,25,75,927.27** |
| Closing Balance as per Annual Accounts | 22,25,75,927.27 |
| Difference | - |

Finance Officer
Dr B R Ambedkar School of
Economics University Bengaluru

(ಅಂಶ - 25(2))

2023-2024 ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗಾಗಿ ಕರ್ನಾಟಕ ಗೃಹ ಮಂಡಳಿ ಹಾಗೂ ಕೆ.ಆರ್. ಐ ಡಿ ಎಲ್ ಗೆ ಮೊತ್ತವನ್ನು ಪಾವತಿಸಿರುವ ವಿವರಗಳು

KHB

| Sl. No. | Date | Chq no | Particular | Purpose | Total Amount |
|---|---|---|---|---|---|
| 1 | 18.5.2023 | 239181 | karanataka Housing Board | rajajihall works | 1,78,70,300.00 |
| 2 | 18.5.2023 | 239183 | karanataka Housing Board | Interior works | 10,05,48,000.00 |
| 4 | 03-02-2024 | 110422 | Karnataka Housing board | 1st stage infrastructure | 2,35,20,000.00 |
| 4 | 03-02-2024 | 110483 | Karnataka Housing board | 1st stage infrastructure | 9,80,00,000.00 |
| | | | Total | | **23,99,38,300.00** |

KRIDL

| Sl. No. | Date | Chq no | Particular | Purpose | Total Amount |
|---|---|---|---|---|---|
| 1 | 11-09-2023 | 324910 | KRIDL | landscape | 86,40,000.00 |

Finance Officer
Dr B R Ambedkar School of
Economics University, Bengaluru